# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:205 • ನೋಂದಣಿ ನಂ.:KARKAN27911 • ವಿಜಯನಗರ • 09.01.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:205 • Reg.No:KARKAN27911 • VIJAYANAGARA • 09.01.2024 • Tuesday • Page:04 • Rs:2


# ದೇವ ಮೆಚ್ಚುವ ಕಲೆಗಳಿಗೆ ಆದ್ಯತೆ

## ಕಲೆ ಸಂಸ್ಕೃತಿ ಉಳಿವಿಗಾಗಿ ಹಂಪಿ ಉತ್ಸವ: ಶಾಸಕ ಗವಿಯಪ್ಪ | ಹಂಪಿ ಉತ್ಸವ ಫೆ.2ರಿದ ಮೂರುದಿನ ಕ್ಲಾಸಿಕಲ್‌ಗೆ ಆದ್ಯತೆ–ಡಿಸ್ಕೋಗೆ ಬ್ರೇಕ್ ಡಿಸಿ ಹೇಳಿಕೆ | ಹಂಪಿ ಉತ್ಸವಕ್ಕೆ 15 ಕೋಟಿ ರೂ.ಗೆ ಪ್ರಸ್ತಾವನೆ

**ಹಂಪಿ ಟೈಮ್ಸ್ ಹೊಸಪೇಟೆ**

ಬರಗಾಲದ ಹೆಸರಲ್ಲಿ ಕಲೆ ಬರಡಾಗಬಾರದೆಂಬ ಆಶಯದಿಂದ ಕಲಾವಿದರ ಕಲೆ ಉಳಿವಿಗಾಗಿ ಹಂಪಿ ಉತ್ಸವವನ್ನು ಸಾಂಸ್ಕೃತಿಕ ವಿಜೃಂಭಣೆಯಿಂದ ಆಚರಿಸಲು ಸಿಎಂ ಸಿದ್ದರಾಮಯ್ಯನವರೊಂದಿಗೆ ತೀರ್ಮಾನಿಸಲಾಗಿದೆ. ಎಲ್ಲರ ಅಭಿಪ್ರಾಯದೊಂದಿಗೆ ಧಾರ್ಮಿಕ ಕ್ಷೇತ್ರದಲ್ಲಿ ದೇವರಿಗೆ ಮೆಚ್ಚುವಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶಾಸಕ ಹೆಚ್.ಆರ್. ಗವಿಯಪ್ಪ ಅವರ ಸಮ್ಮುಖದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಗ್ರಾಮೀಣ ಜನರು ಎತ್ತು ಬಂಡಿಯೊಂದಿಗೆ ಕುಟುಂಬ ಸಮೇತರಾಗಿ ಹಂಪಿಗೆ ಆಗಮಿಸಿ ಒಂದೆರೆಡು ದಿನ ಉಳಿಯುತ್ತಾರೆ. ಜಿಲ್ಲಾಧಿಕಾರಿಗಳ ಅನುಮತಿಯೊಂದಿಗೆ ಉತ್ಸವಕ್ಕೆ ಬಂದವರಿಗೆ ಅನ್ನದಾಸೋಹದ ವ್ಯವಸ್ಥೆ ಕಲ್ಪಿಸಲಾಗುವುದು. ಹಂಪಿ ಉತ್ಸವದಲ್ಲಿ ಸ್ಥಳೀಯ, ಜಿಲ್ಲೆ, ರಾಜ್ಯದ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಹಂಪಿ ಉತ್ಸವದ ರೂವಾರಿ ಎಂಪಿ ಪ್ರಕಾಶರ ಚಿಂತನೆಗಳಂತೆ ಹೊರ ರಾಜ್ಯ, ಅಂತರಾಷ್ಟ್ರೀಯ ಕಲಾವಿದರನ್ನು ಆಹ್ವಾನಿಸುವ ಚಿಂತನೆ ಇದೆ. ನಮ್ಮ ಬಡ್ಜೆಟ್‌ಗೆ ಅನುಗುಣವಾಗಿ ಕಲಾವಿದರನ್ನು ಆಹ್ವಾನಿಸಲಾಗುವುದು. ರಾಜ್ಯ ಸಾಂಸ್ಕೃತಿಕ ಸೌರಭವನ್ನು ಪ್ರವಾಸಿಗರಿಗೆ ಉಣಬಡಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಎಮ್.ಎಸ್.ದಿವಾಕರ ಮಾತನಾಡಿ, ಕಳೆದ ವರ್ಷದ ಅಚಾತುರ್ಯಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಹಾಗೂ ಜನಾಕಾರ್ಷಣೆ ಉತ್ಸವ ಮಾಡಲು ಸಿದ್ಧತೆ ಕೈಗೊಳ್ಳಲಾಗಿದೆ. ಕಳೆದ ಬಾರಿಯಂತೆ ನಾಲ್ಕು ಮತ್ತೊಂದು ವೇದಿಕೆ ನಿರ್ಮಿಸಲಾಗುವುದು. ಗಾಯತ್ರಿಪೀಠ, ವಿರೂಪಾಕ್ಷ ದೇವಾಲಯ, ಎದುರುಬಸವಣ್ಣ ಮತ್ತು ಸಾಸಿವೆ ಕಾಳು ಗಣಪ ಹಾಗೂ ಧ್ವನಿ ಮತ್ತು ಬೆಳಕು ಪ್ರದರ್ಶನವನ್ನು ಗಜಾಲಯ ಆವರಣದಲ್ಲಿ ವೇದಿಕೆ ನಿರ್ಮಾಣಗೊಳ್ಳಲಿವೆ. ಹಂಪಿ ಉತ್ಸವದ ನೆಲ ಸಾಂಸ್ಕೃತಿಕ ಕಲೆಯ ತವರಾಗಿದ್ದು,






ಈ ಬಾರಿ ಡಿಸ್ಕೋ ಮತ್ತು ಫ್ಯಾಶನ್ ಶೋನಂಥ ವಿದೇಶಿ ಸಂಸ್ಕೃತಿಗೆ ಬ್ರೇಕ್ ಹಾಕಲಾಗಿದೆ. ಫೆ.2ರಿಂದ ಮೂರು ದಿನಗಳ ಕಾಲ ನಡೆಯುವ ಉತ್ಸವಕ್ಕೆ 15 ಕೋಟಿ ರೂಗಳ ಪ್ರಸ್ತಾವನೆ ಸಲ್ಲಿಸಲಾಗಿದೆ. ಸ್ಥಳೀಯ ಉದ್ಯಮಿಗಳಿಂದ ಸಿಎಸ್ಸಾರ್ ನಡ ಸಹಕಾರ ಪಡೆಯಲಾಗುವುದು. ತಾಲೂಕನಾದ್ಯಂತ 100 ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗುವುದು.

ಉತ್ಸವಕ್ಕೆ ತಡವಾಗಿ ದಿನಾಂಕ ಘೋಷಣೆಯಾದರು ಉತ್ಸವ ನಡೆಸಲು ಉತ್ಸುಕರಾಗಿರುವ ಸ್ಥಳೀಯ ಶಾಸಕರು ಸೇರಿದಂತೆ ಜಿಲ್ಲೆಯ ಎಲ್ಲ ಜನ ಪ್ರತಿನಿಧಿಗಳ, ಅನುಭವಿಗಳ ಸಲಹೆ ಪಡೆದು ಉತ್ಸವವನ್ನು ಯಶಸ್ವಿ ಮಾಡಲು ಸಕಲ ಪ್ರಯತ್ನ ಮಾಡಲಾಗುವುದು. ವಿವಿಧ ಸಮಿತಿಗಳನ್ನು ರಚಿಸಿ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಜನರಲ್ಲಿ ಭಕ್ತಿ, ಶಾಂತಿ ಭಾವವನ್ನು ಪ್ರೇರೇಪಿಸುವ ಸಂಗೀತ ಕಾರ್ಯಕ್ರಮಗಳಿಗೆ ಆದ್ಯತೆ ನಿಡಲಾಗುತ್ತದೆ.

**ಜನಾಕರ್ಷಣೆಗಾಗಿ ವಿಶೇಷ ಕಾರ್ಯಕ್ರಮ:** ಐತಿಹಾಸಿಕ ಉತ್ಸವಕ್ಕೆ ಸ್ವಯಂ ಪ್ರೇರಣೆಯಿಂದ ಆಗಮಿಸಲು ಇಚ್ಚಿಸುವ ಖ್ಯಾತ ಗಾಯಕರನ್ನು ಕರೆತರುವ ಯೋಜನೆ ಇದೆ. ಯುವಕರು, ಮಹಿಳೆಯರು, ಮಕ್ಕಳು ಸೇರಿದಂತೆ ಎಲ್ಲಾ ವರ್ಗದ ಜನ ಸಮುದಾಯವನ್ನು ಆಕರ್ಷಿಸಲು ಉತ್ಸವದಲ್ಲಿ ವೈವಿಧ್ಯಮಯವಾಗಿ ಕಾರ್ಯಕ್ರಮ ರೂಪಿಸಲಾಗುವುದು. ರೈತರಿಗಾಗಿ ಕೃಷಿ ಪ್ರದರ್ಶನ, ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮ, ಮಹಿಳೆಯರಿಗಾಗಿ ಕ್ಲಾಸಿಕಲ್ ಸಂಗೀತ ಸೇರಿದಂತೆ ನಾನಾ ಕಾರ್ಯಕ್ರಮ ರೂಪಿಸಲಾಗುವುದು. ಜಿಲ್ಲೆಯ ಎಲ್ಲ ಶಿಕ್ಷಣ ಸಂಸ್ಥೆಗಳ ಪ್ರಮುಖರ ಸಹಯೋಗದೊಂದಿಗೆ ಶಾಲಾ ವಾಹನಗಳ ಮೂಲಕ ವಿದ್ಯಾರ್ಥಿಗಳನ್ನು ಸೇರಿಸಲಾಗುವುದು. ಹಂಪಿ ಉತ್ಸವದಲ್ಲಿ ಪ್ರತಿ ಬಾರಿ ಸಾಂಪ್ರದಾಯಿಕವಾಗಿ ನಡೆಸುವ ಅಡುಗೆ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಕುಸ್ತಿ ಹಾಗೂ ಕಲ್ಲು ಎತ್ತುವ ಸ್ಪರ್ಧೆ ಸೇರಿದಂತೆ ಎಲ್ಲಾ ಬಗೆಯ ಕ್ರೀಡಾ ಸ್ಪರ್ಧೆಗಳಿಗೆ ಉತ್ಸವದಲ್ಲಿ ಅವಕಾಶವಿರಲಿದೆ ಎಂದರು.

**ಹಂಪಿ ವಿವಿಯ ಸಹಯೋಗ:**
ಹಂಪಿಯ ಇತಿಹಾಸದಲ್ಲಿ ಕನ್ನಡ ವಿಶ್ವ ವಿದ್ಯಾಲಯವು ಒಂದು ಕಿರೀಟವಿದ್ದಂತೆ. ವಿಶ್ವ ವಿದ್ಯಾಲಯದ ಕುಲಪತಿಗಳು ಸೇರಿದಂತೆ ಅಲ್ಲಿನ ಎಲ್ಲ ವಿಭಾಗಗಳ ಪ್ರಾಧ್ಯಾಪಕರೊಂದಿಗೆ ಚರ್ಚಿಸಿ ಪುಸ್ತಕ ಮಳಿಗೆ ಸೇರಿದಂತೆ ವಿಭಿನ್ನ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

**ಪಾಸ್ ಗೊಂದಲಬೇಡ:** ಉತ್ಸವದಲ್ಲಿ ಮಾಧ್ಯಮ ಪ್ರತಿನಿಧಿಗಳು, ಕಲಾವಿದರು, ಗಣ್ಯರು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಹಾಗೂ ಇನ್ನೀತರರು ಉತ್ಸವದಲ್ಲಿ ಅಚ್ಚುಕಟ್ಟಾಗಿ ಭಾಗಿಯಾಗಿ ಉತ್ಸವವನ್ನು ಯಶಗೊಳಿಸುವ ನಿಟ್ಟಿನಲ್ಲಿ ಗೊಂದಲವಾಗದಂತೆ ಪಾಸುಗಳ ವಿತರಣೆ ಮಾಡಲಾಗುವುದು. ಉತ್ಸವದಲ್ಲಿ ಕೋವಿಡ್ ನಿಮಯಗಳು ಅಡ್ಡಿಯಾಗಂತೆ ಮುನ್ನೆಚ್ಚರಿಕೆವಹಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಹೆಚ್.ಆರ್. ಗವಿಯಪ್ಪ, ಜಿಪಂ ಸಿಇಓ ಸದಾಶಿವ ಪ್ರಭು ಬಿ, ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಂ ಷಾಹ ಇದ್ದರು.

---

**ಮೈಕ್ರೋ ನ್ಯೂಸ್**

## ಜ.9ರಂದು ಹಂಪಿಯಲ್ಲಿ ಪುಸ್ತಕ ಬಿಡುಗಡೆ ಸಮಾರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ-32ರ ಪುಸ್ತಕ ಬಿಡುಗಡೆ ಸಮಾರಂಭವನ್ನು ಜ.9ರಂದು ಬೆಳಿಗ್ಗೆ 11ಗಂಟೆಗೆ ವಿವಿಯ ಮಂಟಪ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಕೆ.ರವಿ ಅವರು ಪುಸ್ತಕ ಬಿಡುಗಡೆ ಮಾಡುವರು. ಮುಖ್ಯ ಅತಿಥಿಗಳಾಗಿ ಧಾರವಾಡದ ಹಿರಿಯ ಇತಿಹಾಸತಜ್ಞರು ಹಾಗೂ ಸಂಸ್ಕೃತಿ ಚಿಂತಕರಾದ ಪ್ರೊ. ಲಕ್ಷ್ಮಣ್ ತೆಲಗಾವಿ, ಗಂಗಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಜಾಜಿ ದೇವೇಂದ್ರಪ್ಪ, ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಜೆ.ಕೃಷ್ಣಅವರು ಪಾಲ್ಗೊಳ್ಳುವರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ.ವಿ ಪರಮಶಿವಮೂರ್ತಿ ಅವರು ಅಧ್ಯಕ್ಷತೆ ವಹಿಸುವರು. ಸಮಾರಂಭದಲ್ಲಿ ಸುಮಾರು 51 ಪುಸ್ತಕಗಳು ಬಿಡುಗಡೆಯಾಗಲಿವೆ ಎಂದು ತಿಳಿಸಿದೆ.

## 10ಕ್ಕೆ ಹಂಪಿ ಕನ್ನಡ ವಿವಿಯ 32ನೇ ನುಡಿಹಬ್ಬ ಘಟಿಕೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಕನ್ನಡ ವಿಶ್ವವಿದ್ಯಾಲಯದ32ನೇ ನುಡಿಹಬ್ಬ ಘಟಿಕೋತ್ಸವ ಕಾರ್ಯಕ್ರಮವನ್ನು ಜ.10ರಂದು ಸಂಜೆ 5.30ಕ್ಕೆ ಹಂಪಿ ವಿದ್ಯಾರಣ್ಯದ ನವರಂಗ ಬಯಲು ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಹಾಗೂಕನ್ನಡ ವಿಶ್ವವಿದ್ಯಾಲಯದ ಕಲಾಧಿಪತಿಗಳೂ ಆಗಿರುವ ಥಾವರ್ ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ, 'ನಾಡೋಜ' ಗೌರವ ಪದವಿ ಪ್ರಧಾನ ಮಾಡುವರು. ಉನ್ನತ ಶಿಕ್ಷಣ ಸಚಿವರು ಮತ್ತು ಸಮಕುಲಾಧಿಪತಿಗಳಾದ ಡಾ. ಎಂ.ಸಿ ಸುಧಾಕರ್ ಅವರು ಡಿ.ಲಿಟ್ ಹಾಗೂ ಪಿಎಚ್.ಡಿ ಪದವಿಗಳನ್ನು ಪ್ರದಾನ ಮಾಡುವರು. ಅನಂತಪುರಂನ ಆಂಧ್ರ ಪ್ರದೇಶ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಸ್.ಎ.ಕೋರಿ ಅವರು ಘಟಿಕೋತ್ಸವ ಭಾಷಣ ಮಾಡುವರು. ಹಂಪಿ ಕನ್ನಡ ವಿವಿಯ ಕುಲಪತಿಗಳಾದ ಡಾ. ಡಿ.ವಿ ಪರಮಶಿವಮೂರ್ತಿ ಅವರುಸ್ವಾಗತ ಭಾಷಣ ಮಾಡುವರು. ಘಟಿಕೋತ್ಸವದ ಪ್ರಯುಕ್ತ ಮೆರವಣಿಗೆ ಸೇರಿದಂತೆ ವಿವಿಧಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದೆ.

**ಒಳ ಪುಟಗಳಲ್ಲಿ**


**ಮಕ್ಕಳಿಗೆ ಪರ್ಸಂಟೇಜ್ ಹೊರೆಯೇ ಅಥಾವ ವರವೇ**
–ಡಾ.ಸುಮಲತ ಬಿ.ಎಂ.
ಪುಟ 2 ರಲ್ಲಿ ಓದಿ

**ಬಾಲ್ಯ ವಿವಾಹಕ್ಕೆ ತಳ್ಳಬೇಡಿ**
ಪುಟ 3 ರಲ್ಲಿ ಓದಿ

**ನೋನಿ ಎಂಬ ಅದ್ಭುತ ಹಣ್ಣು**
– ಎಂ.ಪರಶುರಾಮ
ಪುಟ 2 ರಲ್ಲಿ ಓದಿ

**ಸಂತ್ರಸ್ತರಿಗೆ ಪರಿಹಾರ ಒದಗಿಸಿ**
ಪುಟ 3 ರಲ್ಲಿ ಓದಿ


---

# ನಗರಸಭೆ ಪೌರಾಯುಕ್ತ, ಇಂಜಿನಿಯರ್‌ಗಳ ಅಮಾನತ್ತಿಗೆ ಡಿಸಿ ಶಿಫಾರಸ್ಸು

**ಹಂಪಿ ಟೈಮ್ಸ್ ಹೊಸಪೇಟೆ**

ಇಲ್ಲಿನಲ ನಗರಸಭೆ ವ್ಯಾಪ್ತಿಯ ಕಾರಿಗನೂರಿನ ಶಿಕಾರಿ ಕ್ಯಾಂಪಿನಲ್ಲಿ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಪೂರೈಕೆಯಾದ ಕಲುಷಿತ ನೀರು ಸೇವಿಸಿ ವೃದ್ಧೆ ಸೀತಮ್ಮ (66) ಸೋಮವಾರ ಮೃತರಾಗಿದ್ದಾರೆ. 35ಕ್ಕೂ ಅಧಿಕ ಜನರು ವಾಂತಿಭೇದಿ ತುತ್ತಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆಗೆ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯವೆಂದು ಪರಿಗಣಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಖಾನ್ ಅವರು ನಗರಸಭೆ ಪೌರಾಯುಕ್ತ ಬಿ.ಟಿ.ಬಂಡಿವಡ್ಡರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಸತೀಶ್ ಮತ್ತು ಕಿರಿಯ ಅಭಿಯಂತರ ಕೆ.ಖಾಜಾ ಹುಸೇನ್ ಖಾಜಿ ಅವರನ್ನು ಕೂಡಲೇ ಅಮಾನತ್ತುಗೊಳಿಸಿ, ಇಲಾಖೆ ವಿಚಾರಣೆ ಮಾಡಲು ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಎಮ್.ಎಸ್.ದಿವಾಕರ ಅವರು ಈ ಪ್ರಕರಣ ಕುರಿತು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಕಾರಿ ಕ್ಯಾಂಪಿನ ಜನ ಕಲುಷಿತ ನೀರು ಕುಡಿದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪತ್ರಿಕೆ ವರದಿ ಆಧರಿಸಿ ಸಂಬಂಧಿಸಿದ ನಗರಸಭೆ ಪೌರಾಯುಕ್ತ ಮತ್ತು ಅಭಿಯಂತರರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿತ್ತು. ನೀರು ಶುದ್ಧಿಕರಣ ಘಟಕದಲ್ಲಿ 15 ದಿನಗಳಿಂದ ಕ್ಲೋರಿನೇಷನ್ ಸಿಲೆಂಡರ್ ಮುಕ್ತಾಯವಾಗಿದ್ದು ನಗರದ ಜನರಿಗೆ ಕ್ಲೋರಿನೇಷನ್







ಮಾಡದೆ ನೀರು ಸರಬರಾಜು ಮಾಡಿರುವುದು ಕಂಡುಬಂದಿರುತ್ತದೆ. ಅಶುದ್ಧ ನೀರನ್ನು ಕುಡಿದವ ಪೈಕಿ ಒಬ್ಬರು ಸಾವನ್ನಪ್ಪಿರುವುದು ವರದಿಯಾಗಿದೆ. ಕಾರಣ ಕೇಳಿ ನೀಡಲಾದ ನೋಟಿಸ್‌ಗೆ ನೀಡಿದ ವರದಿ ಸಮಂಜಸವಾಗಿರದ ಕಾರಣ, ಮುನ್ನೆಚ್ಚರಿಕೆ ವಹಿಸಬೇಕಾದವರೆ ನಿರ್ಲಕ್ಷ್ಯತೋರಿ ಸಾರ್ವಜನಿಕರಿಗೆ ಅಶುದ್ಧವಾದ ನೀರು ಸರಬರಾಜು ಮಾಡಿ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿರುವುದು ಕಂಡುಬಂದಿದೆ. ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲರಾಗಿರುತ್ತಾರೆ. ಪೌರಾಯುಕ್ತ ಬಿ.ಟಿ.ಬಂಡಿವಡ್ಡರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಸತೀಶ್ ಮತ್ತು ಕಿರಿಯ ಅಭಿಯಂತರ ಕೆ.ಖಾಜಾ ಹುಸೇನ್ ಖಾಜಿ ಅವರನ್ನು ಕಾನೂನಿನ ನಿಯಮಾನುಸಾರ ಕರ್ತವ್ಯದಿಂದ ಅಮಾನತ್ತುಗೊಳಿಸಲು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು.

# ತುಳಿಸಿಕೊಂಡು ಹರಕೆ ತೀರಿಸಿದ ಭಕ್ತರು

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಅರಸೀಕೆರೆ ಗ್ರಾಮದಲ್ಲಿ ನಡೆದ 2024ನೇ ವರ್ಷದ ಮೊದಲನೇ ದಂಡಿನ ದುರುಗಮ್ಮ ದೇವಿಯ ಜಾತ್ರಮಹೋತ್ಸವದ ಕೊನೆಯ ದಿನವಾದ ಭಾನುವಾರ ನಸುಕಿನ ಜಾವ ಹೊಳೆ ಪೂಜೆ ಮುಗಿಸಿಕೊಂಡು ವಾಪಸಾಗುವಾಗ ದಲಿತ ಪೂಜಾರಿ ಪಿ.ಸಂತೋಷ ದೇವರು ಕೇಲನ್ನು( ಪೂಜಾ ಸಾಮಗ್ರಿಗಳು) ಹೊತ್ತು ದೇವಸ್ಥಾನಕ್ಕೆ ಬರುತ್ತಾರೆ. ಹೀಗೆ ಬರುವಾಗ ಹೊಳೆಯಿಂದ ದೇವಸ್ಥಾನಕ್ಕೆ ಒಂದು ಕಿಲೋಮೀಟರ್ ದೂರದಲ್ಲಿ ದಾರಿಯುದ್ದಕ್ಕೂ ಭಕ್ತಾದಿಗಳು ಬೋರಲಾಗಿ ಮಲಗಿ ದಲಿತ ಪೂಜಾರಿಯ ಪಾದಸ್ಪರ್ಶ ಪಡೆದು ಪುನೀತರಾದರು,

ರೋಗರುಜಿನಗಳಿಗೆ ತುತ್ತಾಗಿ, ಜನ-ಜಾನುವಾರುಗಳಿಗೆ ಸಮಸ್ಯೆಗಿಡದಾಗ ಇನ್ನೂ ಮುಂತಾದ ಸಮಸ್ಯೆಗಳು ಸಿಲುಕಿದಾಗ ಶ್ರೀ ದುರ್ಗಮ್ಮ ದೇವಿಗೆ ನಿನಗೆ ಮುಂದಿನ ವರ್ಷ ಅಡ್ಡ ಮಲಗುತ್ತೇನೆ ಎಂದು ಹರಕೆ ಹೊತ್ತಿರುತ್ತಾರೆ. >>4






## ವಚನ ಅರಿವು

### ನಿಜ ಬೀಜ ಬಿತ್ತಬೇಕು

ಕಲ್ಲ ಬಿತ್ತಿ ನೀರನೆರೆದಲ್ಲಿ
ಪಲ್ಲವಿಸುವುದೆ ದಿಟದ ಬೀಜದ ವೃಕ್ಷದಂತೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ಇಲ್ಲದಲ್ಲಿ
ಗುರುಭಕ್ತಿ, ಶಿವಲಿಂಗ ಪೂಜೆ, ಚರಸೇವೆ
ತ್ರಿವಿಧ ಇತ್ತವೆ ಉಳಿಯಿತ್ತು.
ಮತ್ತೆ ನಿಜವಸ್ತುವಿನ ಸುದ್ಧಿ ನಿಮಗೆತ್ತಣದೊ?
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ
ವಿಶ್ವಾಸಬೇಕು.

– ಮೋಳಿಗೆ ಮಹಾದೇವಿ

ಕಲ್ಲನ್ನು ಬಿತ್ತಿ ನೀರು ಹಾಕಿದರೆ ಅದು ಮೊಳೆತು ಗಿಡವಾಗಲಾರದು. ಲಿಂಗದ ಮೇಲೆ ಅಚಲವಾದ ಭಕ್ತಿ, ಶದ್ಧೆ, ಸನ್ಮಾರ್ಗ, ಒಳ್ಳೆಯ ರೀತಿಯ ನಡವಳಿಕೆ, ನೈತಿಕ ಮಾರ್ಗದಲ್ಲಿ ಬದುಕುವುದು, ನಿಷ್ಠೆ, ಪ್ರಾಮಾಣಿಕತೆ, ಶರಣರು ತೋರಿದ ಗುರು ಮಾರ್ಗ, ಪರದೈವವನ್ನು ಪೂಜಿಸದೆ ಲಿಂಗದ ಮೇಲೆ ವಿಶ್ವಾಸವಿಟ್ಟು ಬದುಕಬೇಕು. ಇಂತಹವರ ತನು, ಮನ, ಭಾವ ಶುದ್ಧವಾಗಿರುತ್ತದೆ. ಅನಾಚಾರದಲ್ಲಿ ತೊಡಗಿ ಕಾಮ, ಆಸೆ, ಆಮಿಷಗಳಿಗೆ ಒಳಗಾಗಿ ಬದುಕಿದರೆ ನಿಜದ ಅರಿವು ದೊರೆಯುವುದಿಲ್ಲ. ಬಿತ್ತಿದರೆ ನಿಜ ಬೀಜಗಳನ್ನು ಬಿತ್ತಬೇಕು. ಅವು ಮೊಳಕೆಯೊಡೆದು, ಒಳ್ಳೆಯ ಫಲವನ್ನು ನೀಡುತ್ತವೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಸಿಎಂ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಜಗದ್ಗುರುಗಳು



ಬೆಂಗಳೂರು: ವಚನ ಚಳವಳಿಯ ಅಣ್ಣ ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ ಒತ್ತಾಯಿಸಿ ತರಳಬಾಳು ಜಗದ್ಗುರುಗಳು ಮತ್ತು ಜಗದ್ಗುರು ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ ನೇತೃತ್ವದ ಲಿಂಗಾಯತ ಸ್ವಾಮೀಜಿಗಳು, ಪ್ರಗತಿಪರ ಸ್ವಾಮೀಜಿಗಳು, ಪ್ರಗತಿಪರ ಚಿಂತಕರು ಮತ್ತು ದಲಿತ, ರೈತ, ಕಾರ್ಮಿಕ ಮುಖಂಡರುಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿ ಮನವಿ ಅರ್ಪಿಸಿದರು.
ನಿಯೋಗದಲ್ಲಿ ಶ್ರೀಶೈಲ ಜಗದ್ಗುರುಗಳು, ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಡಾ.ರಾಜಶೇಖರ ಶಿವಾಚಾರ್ಯರು, ಡಾ.ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ, ಶ್ರೀ ವೀರಭದ್ರ ಶಿವಾ ಕಡಕಂಚಿ, ಅಕ್ಕ ಅನ್ನಪೂರ್ಣತಾಯಿ, ಜ್ಞಾನ ಪ್ರಕಾಶ ಸ್ವಾಮೀಜಿ, ಡಾ. ಗಂಗಾಬಿಕೆ ಅಕ್ಕ, ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿ 48 ಮಂದಿ ಸ್ವಾಮೀಜಿಗಳು, ಶರಣರು ನಿಯೋಗದಲ್ಲಿದ್ದ ಪ್ರಮುಖರು.
ಸಚಿವರಾದ ಎಂ.ಬಿ.ಪಾಟೀಲ್, ಈಶ್ವರ ಖಂಡ್ರೆ ಮತ್ತು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ನಸೀರ್ ಅಹಮದ್ ಹಾಗೂ ಕ್ರೈಸ್ತ ಧರ್ಮ ಗುರುಗಳು ನಿಯೋಗದ ಜತೆಗಿದ್ದರು.
ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಲಯದಿಂದ ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಎಚ್. ಎಲ್.ಪುಷ್ಪ, ಮಾವಳ್ಳಿ ಶಂಕರ್, ವಸುಂಧರ ಭೂಪತಿ, ಕೆ. ಷರೀಫಾ, ಎಲ್.ಮುಕುಂದರಾಜು, ಜಾಗೃತ ಕರ್ನಾಟಕದ ಬಿ.ಸಿ.ಬಸವರಾಜು, ದೊಡ್ಡಿಪಾಳ್ಯ ನರಸಿಂಹಮೂರ್ತಿ ಸೇರಿ ಹಲವು ಪ್ರಮುಖರು ನಿಯೋಗದ ಜತೆಗಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಮಕ್ಕಳಿಗೆ ಪರ್ಸಂಟೇಜ್ ಹೊರೆಯೇ ಅಥವಾ ವರವೇ ?





**ಡಾ.ಸುಮಲತ ಬಿ.ಎಂ.**
**ಹೊಸಪೇಟೆ**

ಮಕ್ಕಳ ಶಿಕ್ಷಣದ ಯಶಸ್ಸಿನಲ್ಲಿ ಶಾಲೆ ಮತ್ತು ಸಮಾಜ ಪ್ರಮುಖ ಪಾತ್ರವಹಿಸುತ್ತವೆ. ಶಾಲೆಯು ಮುಗುವನ್ನು ಸಂಪೂರ್ಣವಾಗಿ ಸಾಮಾಜೀಕರಣಗೊಳಿಸುವ ಒಂದು ಅಂಗವಾಗಿದೆ. ಶಾಲೆಯು ಮಗುವಿಗೆ ಸಮಾಜದಲ್ಲಿ ಶಿಸ್ತಿನಿಂದ ಮತ್ತು ಆದರ್ಶವಾಗಿ ಬದುಕುವ ರೀತಿಯನ್ನು ತಿಳಿಸಿಕೊಡುತ್ತದೆ. ಅದೇ ರೀತಿ ಶಿಕ್ಷಕರು ಮಕ್ಕಳ ಕಲಿಕೆಯು ವಿಂಲವಾಗದಂತೆ ಅಭಿಪ್ರೇರಣೆಯನ್ನು ನೀಡಬೇಕಾಗುತ್ತದೆ. ಎಲ್ಲಾ ಮಕ್ಕಳಲ್ಲಿಯೂ ಆಂತರಿಕ ಅಭಿಪ್ರೇರಣೆಯು ಇರುವುದಿಲ್ಲ. ಅಂತಹ ಮಕ್ಕಳಿಗೆ ಶಾಲೆ ಮತ್ತು ಸಮಾಜದ ಪರಿಸರ ಬಾಹ್ಯ ಅಭಿಪ್ರೇರಣೆಯನ್ನು ನೀಡಬೇಕು. ಶಿಕ್ಷಕರು ತಮ್ಮ ಕ್ರೀಯಾಶೀಲತೆಯಿಂದ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸಲು ಕ್ರಿಯಾತ್ಮಕ ಪದ್ಧತಿಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯನ್ನು ಮೂಡಿಸಲು ಶಿಕ್ಷಕರೇ ನೀಡಬೇಕಾಗುತ್ತದೆ. ಭಯ ನಿವಾರಣೆಯಾದಾಗ ಕುತೂಹಲ ಮತ್ತು ಸೃಜಶೀಲತೆಗಳು ಕಾರ್ಯೋನ್ಮುಖವಾಗುತ್ತವೆ. ಶಿಕ್ಷಕರಾದವರು ಶಿಕ್ಷಣದ ಮಹತ್ವವನ್ನು ತಿಳಿಸಿಕೋಡಬೇಕು ಹೊರೆತು ಪರ್ಸಂಟೇಂಜ್ ಎನ್ನುವ ಹೊರೆಯನ್ನಲ್ಲ.

ಪ್ರಸ್ತುತ ಕಾಲಮಾನದಲ್ಲಿ ಎಲ್.ಕೆ.ಜಿ ಯಿಂದ ಇಡಿದು ಪಿ.ಯು.ಸಿ ವರೆಗು ಮಕ್ಕಳಿಗೆ ಪರ್ಸಂಟೇಜ್ ಎನ್ನುವುದು ಭೂತದ ತರ ಕಾಡುವ ವಿಷಯ ಹಾಗೆ ಅದು ಪೋಷಕರಿಗೂ ಕೂಡ ಕಾಡುವಂತ ಭಯ. ಮಕ್ಕಳು ಸರಿಯಾಗಿ ಓದಿ ಜಾಸ್ತಿ ಅಂಕ ತೆಗೆದರೆ ಮಾತ್ರ ಅವರಿಗೆ ದುಡ್ಡು ಕಡಿಮೆ ಖರ್ಚು ಇರುತ್ತದೆ ಇಲ್ಲ ಅಂದರೆ ಮಕ್ಕಳಿಗೆ ಸಾಲ ಮಾಡಿ ಓದಿಸಬೇಕು ಎನ್ನುವುದು ಎಲ್ಲಾ ಪೋಷಕರಿಗೂ ಭಯ ಇರುತ್ತದೆ. ರೀ ಸುನಂದ ನನ್ನ ಮಗ/ಮಗಳು 99% ಪರ್ಸಂಟೇಜೆ ತೆಗೆದಿದ್ದಾರೆ ನಿಮ್ಮ ಮಕ್ಕಳದು ಎಷ್ಟು ಪರ್ಸಂಟೇಜೆ ಎನ್ನುವ ಅಕ್ಕ ಪಕ್ಕದವರ ಮಾತು ಪೋಷಕರನ್ನು ಕಂಗೆಡಿಸುತ್ತದೆ. ಇಲ್ಲರಿ ವಿದ್ಯಾ ನಾವು ಟೂಷನ್ ಹಾಕಿ, ಬೆಳಿಗ್ಗೆ 5 ಗಂಟೆಗೆ ಎಬ್ಬಿಸಿ ಓದಿಸಿದರು 91% ತಂದಿದ್ದಾರೆ ಏನು ಮಾಡೋದು ದೊಡ್ಡ ದೊಡ್ಡ ಕಾಲೇಜುಗಳಲ್ಲಿ ಸೀಟು ಸಿಗುತ್ತೊ ಇಲ್ವೊ. ನಾವು ಎಂ.ಬಿ.ಬಿ.ಎಸ್. ಮಾಡಿಸಬೇಕು ಅಂದುಕೊಂಡಿದಿವಿ ಅಂತಾ ಪೋಷಕರ ಮಾತುಗಳು ಪ್ರತಿ ವರ್ಷ ಕೇಳಿ ಬರುತ್ತೆ. ಆದರೆ ಮಕ್ಕಳಿಗೆ ಇಷ್ಟ ಇದಿಯೊ ಇಲ್ವೊ ಗೊತ್ತಿಲ್ಲ ಆದ್ರು ಅವರ ಮಕ್ಕಳು ಮೆಡಿಕಲ್ ಓದಲೇಬೇಕು ಇದು ಎಂತಾ ವಿಪಾರ್ಯಸ ಅಲ್ವಾ. ಈಗಿನ ಕಾಲದ ಸಿ.ಇ.ಟಿ., ನಿಟ್ ಗಳು ಮಕ್ಕಳನ್ನು ನಿದ್ದೆಯಲ್ಲೂ ಬೆಚ್ಚಿ ಬಿಳಿಸುತ್ತಿವೆ. 99% ಅನ್ನುವುದು ಈಗ ಸಾಮಾನ್ಯ ವಿಷಯವಾಗಿದೆ, ಮತ್ತು ಹೆಚ್ಚಿನ ಮಕ್ಕಳ ಆತ್ಮಹತ್ಯಗಳಿಗೆ ಕಾರಣವಾಗಿದೆ.

ಪರ್ಸಂಟೇಜ್ ವಿಷಯದಲ್ಲಿ ಶಾಲೆಯ ಮತ್ತು ಶಿಕ್ಷಕರ ಪಾತ್ರ

ನೋಡಿ ಮಕ್ಕಳೆ ಈ ಸಲ ನೀವು 10ನೇ ತರಗತಿ ಆಟ ಆಡೋದು, ಡ್ಯಾನ್ಸ್, ನಾಟಕ ಟೂರ್ ಇವೆಲ್ಲ ಬಂದ್! ಓದು ಒಂದೇ ನಿಮ್ಮ ಗುರಿ 99% ತೆಗೆಯುವುದು ನಿಮ್ಮ ಕನಸು, ಎಲ್ಲಾ ವಿಚಾರಗಳನ್ನು ಕಟ್ಟಿಟ್ಟು ನೀವು ಓದಬೇಕು ಇದು ನಮ್ಮ ಪ್ರಿನ್ಸಿಪಾಲ್ ಆರ್ಡರ್ ಆಗಿದೆ ಎಂದು ತರಗತಿ ಶಿಕ್ಷಕರು ಅವರ

ಮನಸಲ್ಲಿ ಬೀಜ ಬಿತ್ತುತ್ತಾರೆ. ಪ್ರಿನ್ಸಿಪಾಲ್ ಎಲ್ಲಾ ಶಿಕ್ಷಕರಿಗೂ ಹೇಳುವುದು ಇದೆ ನೋಡಿ ಇದು ನಮ್ಮ ಶಾಲೆಯ ಘನತೆ ಪ್ರಶ್ನೆ ನೀವು ಎಲ್ಲಾರು ನಿಮ್ಮ ಸಮಯವನ್ನು ಮಿಸಲಿಡಿ ಎಂದು ತಾಕೀತು ಮಾಡುತ್ತಾರೆ. ಆದರೆ ಶಿಕ್ಷಕರು ಮಕ್ಕಳಿಗೆ ಪರ್ಸಂಟೇಜೇ ಜೀವನ ಅಲ್ಲ ಅದು ಇಲ್ಲದೆ ಜೀವನ ಮಾಡುವುದು ಹೇಗೆ ಎಂಬ ದಾರಿಗಳನ್ನು ಶಾಲೆಗಳಲ್ಲಿ ಯಾಕೆ ಕಲಿಸುವುದಿಲ್ಲ. ಜೀವನದ ಮೌಲ್ಯಗಳನ್ನು ಹೇಳಿ ಕೊಡದೆ ಪಠ್ಯಪುಸ್ತಕಗಳನ್ನೇ ಅವಲಂಬಿತರಾಗುತ್ತಾರೆ. ಆದರೆ ಪಠ್ಯಪುಸ್ತಕಗಳಲ್ಲಿ ಬರುವ ಪಾಠಗಳಿಗೆ ಸಂಬಂಧಿಸಿದಂತೆ ಇರುವ ಮೌಲ್ಯಗಳನ್ನಾದರು ಮಕ್ಕಳಿಗೆ ಮನವರಿಕೆ ಮಾಡಬೇಕು. ಆದರೆ ಪಠ್ಯಪುಸ್ತಕಗಳಲ್ಲಿನ ಪಾಠಗಳು ಕೂಡ ಪರೀಕ್ಷೆ ಮತ್ತು ಅಂಕಗಳಿಗೆ ಮಾತ್ರ ಸೀಮಿತವಾಗಿದೆ. ಉತ್ತರವನ್ನು ಬಾಯಿ ಪಾಠ ಮಾಡಿ ಪರೀಕ್ಷೆ ಪಾಸು ಮಾಡಿದರೆ ಅಷ್ಟೇ ಸಾಕು ಎನ್ನುವ ಮನೋಭಾವ ಶಿಕ್ಷಕರು ಮತ್ತು ಪೋಷಕರದ್ದಾಗಿರುತ್ತದೆ, ಪಾಠಗಳನ್ನು ಓದಿ ಮಕ್ಕಳಿಗೆ ಬರುವ ಹಾಗೆ ಬರೆಯುವ ಸ್ವತಂತ್ರನು ಇಲ್ಲ. ಶಿಕ್ಷಕರು ಏನು ಬರೆಸಿರುತ್ತಾರೆ ಅದೆ ಉತ್ತರವನ್ನು ಬಾಯಿ ಪಾಠ ಮಾಡಿ ಬರೆಯಬೇಕು ಇದು ಶಾಲೆಯ ನಿಯಮ. ನಾಯಿಕೊಡೆಯಂತೆ ಎದ್ದಿರುವ ಇಂಗ್ಲೀಷ ಮಿಡಿಯಮ್ ಶಾಲೆಗಳು ನಾ ಮುಂದು ತಾ ಮುಂದು ಅಂತಾ ತಮ್ಮ ಶಾಲೆ ಮೊದಲ ಸ್ಥಾನದಲ್ಲಿ ಇರಬೇಕೆಂದು ಹರಸಾಹಸ ಮಾಡುತ್ತಾರೆ, ಮಕ್ಕಳ ಮೇಲೆ ಒತ್ತಡ ಹಾಕುತ್ತಾರೆ. ಶಾಲೆಗಳ ಮುಂದೆ ಜಾಸ್ತಿ ಪರ್ಸಂಟೇಜ್ ತೆಗೆದ ಮಕ್ಕಳ ಪೋಟೋ ಜೊತೆ ದೊಡ್ಡ ದೊಡ್ಡ ಬ್ಯಾನರ್‌ಗಳು ಇರುತ್ತವೆ. ಇವು ಬೇರೆ ಮಕ್ಕಳ ಮೇಲೆ ಏನು ಪರಿಣಾಮ ಬೀರಬಹುದು ಎಂಬ ಅರಿವು ಆ ಶಾಲೆಯ ಮುಖ್ಯಸ್ಥರಿಗೆ ಇರುವುದಿಲ್ಲ. ತಮ್ಮ ಶಾಲೆಯ ಪ್ರಚಾರ ಅಷ್ಟೇ ಅವರಿಗೆ ಮುಖ್ಯ. ಶಿಕ್ಷಣ ಎನ್ನುವುದು ಈಗ ವ್ಯಾಪಾರವಾಗಿದೆ. ಮಕ್ಕಳ ಬಗ್ಗೆ ಅವರಿಗೆ ಕಾಳಜಿ ಇರುವುದಿಲ್ಲ, ಕಡಿಮೆ ಅಂಕ ತೆಗೆಯುವ ಮಕ್ಕಳ ಬಗ್ಗೆ ಗಮನ ಹರಿಸುವುದು ಮತ್ತು ಅವರ ಮುಂದಿನ ಭವಿಷ್ಯದ ಬಗ್ಗೆ ಅವರಿಗೆ ಧೈರ್ಯ ತುಂಬಾಬೇಕಾಗಿರುವುದು ಶಿಕ್ಷಕರ ಕರ್ತವ್ಯ. ಕಡಿಮೆ ಅಂಕ ತೆಗೆಯುವ ಮಕ್ಕಳಲ್ಲಿ ಇರುವ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಗುರುತಿಸಿ ಅವರಿಗೆ ಶಾಲಾ ವ್ಯವಸ್ಥೆ ಸಹಾಯ ಮಾಡಬೇಕಿದೆ. ಈ ವ್ಯವಸ್ಥೆ ಎಲ್ಲಾ ಶಾಲೆಗಳಲ್ಲಿ ಒಂದು ಪಠ್ಯದ ಭಾಗವಾಗಬೇಕಿದೆ.

ಇನ್ನೋಂದು ಮುಖ್ಯವಾದ ಅಂಶ ಎಂದರೆ ಈ ದೊಡ್ಡ ದೊಡ್ಡ ಕಾಲೇಜುಗಳಿಗೆ ಮಕ್ಕಳ ಪರ್ಸಂಟೇಜೇ ಅವರಿಗೆ ಬಂಡವಾಳವಾಗಿದೆ. ತುಂಬಾ ದೊಡ್ಡ ದೊಡ್ಡ ಕಾಲೇಜುಗಳಿಗೆ ಬೇಕಾಗಿರುವುದು 90 ಪರ್ಸಂಟೇಜ್ ಮೇಲೆ ತೆಗೆದುಕೊಂಡಾ ಮಕ್ಕಳನ್ನು ಮಾತ್ರ ಅಲ್ಲಿ ಅಡಿಮಿಷನ್‌ಗೆ ಅವಕಾಶ 90 ಕ್ಕಿಂತ ಕಡಿಮೆ ಬಂದರೆ ಅವರಿಗೆ ಪ್ರೇವೇಶ ಇಲ್ಲ. ಅಂದರೆ ಬುದ್ಧಿವಂತ ಮಕ್ಕಳನ್ನೇ ತೊಗಂಡು ಬುದ್ಧವಂತರನ್ನಾಗಿ ಮಾಡುವುದಕ್ಕಿಂತ, ಇವರು ಕಡಿಮೆ ಪರ್ಸಂಟೇಜ್ ತೆಗೆದ ಮಕ್ಕಳನ್ನು ಯಾಕೆ ಪ್ರೇವೇಶ ಕೊಡುವುದಿಲ್ಲ? ಸಮಾಜ ಮತ್ತು ಪೋಷಕರು ಅರಿಯಬೇಕಾದದ್ದು ಏನೆಂದರೆ ಮಕ್ಕಳ ಬುದ್ಧಿಶಕ್ತಿಯನ್ನೇ ಬಂಡವಾಳವಾಗಿ ಇಟ್ಟುಕೊಂಡು ನಡೆಸುವ ಕಾಲೇಜುಗಳಿಗೆ ಚಾಲೆಂಜ್ ಮಾಡಿ. ನೀವು ಕಡಿಮೆ ಪರ್ಸಂಟೇಜ್ ಇರುವವರನ್ನು ಅಡ್‌ಮಿಷನ್ ಮಾಡಿಸಿಕೊಂಡು ಆ ವಿದ್ಯಾರ್ಥಿಗಳ ಕೈಯಲ್ಲಿ 99 ಪರ್ಸಂಟೇಜ್ ಬರುವ ಹಾಗೆ ಮಾಡುವುದು ನಿಮ್ಮ ಕೈಯಲ್ಲಿ ಆಗುತ್ತಾ ಅಂತಾ ಅವರನ್ನು ಕೇಳಬೇಕು. ಅದು ಬುದ್ಧಿವಂತ ಮಕ್ಕಳನ್ನೇ ನೀವು ಇಟ್ಟುಕೊಂಡು ನಿಮ್ಮ ಕಾಲೇಜುಗಳನ್ನು ಹೆಸರು ಮಾಡುವ ಹುನ್ನಾರ ಯಾಕೆ. ಎಲ್ಲಾ ರೀತಿಯ ಮಕ್ಕಳ ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ನೀಟ್, ಸಿ.ಇ.ಟಿ ಕೋಚಿಂಗ್‌ಗಳ ದಂದೆ ಅಂತು ಈಗ ಎಲ್ಲಾ ಕಾಲೇಜುಗಳ ಆಕರ್ಷಿಣಿಯವಾಗಿದೆ. ನಾವು ಅಂತಹ ಕಾಲೇಜುಗಳನ್ನೇ ತಾನೆ ಆಯ್ಕೆ ಮಾಡಿಕೊಳ್ಳವುದು ಅಂತಾ ಅವರಿಗೆ ಚನ್ನಾಗಿ ಗೊತ್ತು ಹಾಗಾಗಿ ಎಲ್ಲಾ ಕೋಚಿಂಗ್‌ಗಳು ನಮ್ಮ ಕಾಲೇಜುಗಳಲ್ಲಿ ಇದೆ ಎಂದು ಪ್ರವೇಶ ತೆಗೆದುಕೊಳ್ಳುತ್ತಾರೆ. ಶಾಲೆ ಮತ್ತು ಕಾಲೇಜು ಶಿಕ್ಷಣ ಈಗ ಮೌಲ್ಯಯುತ ಶಿಕ್ಷಣವಾಗಿ ಉಳಿದಿಲ್ಲ

ಬರಿ ವ್ಯಾಪಾರ ದೃಷ್ಟಿಕೋನದಲ್ಲಿ ಶಿಕ್ಷಣ ವ್ಯವಸ್ಥೆ ಇದೆ. ಇದಕ್ಕೆ ನಾವು ಪೋಷಕರು ಸೊಪ್ಪು ಹಾಕುತ್ತಿದ್ದಿವೆ. ನಾವು ಎಚ್ಚೇತ್ತುಕೊಳ್ಳದಿದ್ದರೆ ಪ್ರತಿರೋಧ ಮಾಡದಿದ್ದರೆ ಈ ಸಮಾಜದಲ್ಲಿ ಮನುಷ್ಯ ಮನುಷ್ಯನ ನಡುವೆ ಏಕತೆ, ಪ್ರಮಾಣಿಕತೆ, ಸಮಾನತೆ ಎಲ್ಲಾ ಕಳೆದುಕೊಂಡು ಯಾಂತ್ರಿಕ ಮನುಷ್ಯನಾಗುತ್ತಾನೆ.

ಕುಟುಂಬ ಮತ್ತು ಸಮಾಜ ಅರಿಯಬೇಕಾಗಿರುವುದು ಏನೆಂದರೆ ಮಕ್ಕಳಿಗೆ ಎಂ.ಬಿ.ಬಿ.ಎಸ್, ಎಂಜಿನಿಯರಿಂಗ್ ಅವುಗಳು ಒಂದೇ ಜೀವನದ ಭದ್ರತೆಯ ದಾರಿ ಅಲ್ಲಾ. ಇನ್ನು ಬೇಕಾದಷ್ಟು ಕೊರ್ಸುಗಳು ಇರುವುದು ನಮ್ಮ ಗಮನದಲ್ಲಿ ಇರಬೇಕು, ಮಕ್ಕಳಿಗೆ ಯಾವುದು ಇಷ್ಟ ಅದನ್ನೆ ನೀವು ಆಯ್ಕೆ ಮಾಡಿಕೊಳ್ಳಿ ಎಂದು ಅವರಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ಮಕ್ಕಳ ಬುದ್ಧಿಮಟ್ಟಕ್ಕೆ ತಕ್ಕಂತೆ ಅವರಿಗೆ ಓದಲು ಸೂಚಿಸಬೇಕಿದೆ. ಅವರಿಗೆ ಇಷ್ಟ ಇಲ್ಲದೆ ಇದ್ದರು ಒತ್ತಡ ಹಾಕಿ ಓದಿಸುವ ಅವಶ್ಯಕತೆ ಇಲ್ಲ. ಪೋಷಕರು ತಮ್ಮ ಘನತೆಗಾಗಿ ಮಕ್ಕಳನ್ನು ಬಲಿಕೊಡಬಾರದು. ನೆಹರೂವರು ಹೇಳಿದ ಹಾಗೆ "ಇಂದಿನ ಮಕ್ಕಳು ನಾಳಿನ ಭಾರತವನ್ನು ನಿರ್ಮಿಸುತ್ತಾರೆ ಮತ್ತು ನಾವು ಅವರನ್ನು ಬೆಳೆಸುವ ರೀತಿ ದೇಶದ ಭಷ್ಯವನ್ನು ನಿರ್ಧರಿಸುತ್ತದೆ ಎಂಬುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ". ಹಾಗೆ ಕುವೆಂಪು ಅವರು "ಮಕ್ಕಳು ಹುಟ್ಟುತ್ತಾ ವಿಶ್ವಮಾನವರಾಗಿ ಹುಟ್ಟುತ್ತಾರೆ, ನಾವು ಅವರನ್ನು ಅಲ್ಪಮಾನವರನ್ನಾಗಿ ಮಾಡುತ್ತೇವೆ" ಎನ್ನುವುದು ನಾವು ಅರ್ಥಮಾಡಿಕೊಂಡು ಮುಂದಿನ ಹೆಜ್ಜೆ ಜವಾಬ್ದಾರಿಯಿಂದ ಇಡಬೇಕಾಗಿದೆ.

# ನೋನಿ ಎಂಬ ಅದ್ಭುತ ಹಣ್ಣು





**ಎಂ.ಪರಶುರಾಮ**
**ಉಪನ್ಯಾಸಕರು.**

ಆರೋಗ್ಯವೇ ಮಹಾಭಾಗ್ಯ ಎಂಬ ಮಾತು ಎಷ್ಟು ಮಹತ್ವದ್ದು ಎಂದರೆ ಈಗ ಎಲ್ಲಾ ಜನರು ಆರೋಗ್ಯವನ್ನು ಪಡೆಯಲು ಯೋಗ, ಪ್ರಾಣಾಯಾಮ, ವಾಕಿಂಗ್ ,ಜಾಗಿಂಗ್ ಹೀಗೆ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡು ತಮ್ಮ ಆರೋಗ್ಯ ರಕ್ಷಣೆಗೆ ಪ್ರಯತ್ನಿಸುತ್ತಿದ್ದಾರೆ . ಹೀಗೆ ಆರೋಗ್ಯದ ಬಗ್ಗೆ ಕಾಳಜಿ ಮಾಡುತ್ತಿರುವವರಲ್ಲಿ ಕೆಲವರು ನೋನಿ ಹಣ್ಣಿನ ಜ್ಯೂಸ್ ಸೇವಿಸುತ್ತಿದ್ದಾರೆ ಹಾಗಾದರೆ ಈ ನೋನಿ ಹಣ್ಣು ಎಂದರೇನು? ಇದನ್ನು ಬಾಳೆಹಣ್ಣು ಆಪಲ್ ಆರೆಂಜ್ ಹಣ್ಣುಗಳ ಹಾಗೆ ತಿನ್ನಬಹುದಾ? ಮತ್ತು ಈ ಹಣ್ಣನ್ನು ಸಾಮಾನ್ಯ ಹಣ್ಣಿನಂತೆ ಮಾರುಕಟ್ಟೆಯಲ್ಲಿ ಏಕೆ ಮಾಡುವುದಿಲ್ಲ ಮತ್ತು ಈ ಹಣ್ಣಿನ ಜ್ಯೂಸ್ ಯಾಕೆ ಈಗ ಅಷ್ಟೊಂದು ಪ್ರಾಮುಖ್ಯತೆ ಪಡೆಯುತ್ತಿದೆ ಎಂಬುದನ್ನು ತಿಳಿಯೋಣ.

"ನೋನಿ ಹಣ್ಣಿನಲ್ಲಿ ಅಪಾರ ಪ್ರಮಾಣದ ಆಂಟಿ ಆಕ್ಸಿಡೆಂಟ್ ಗುಣಗಳಿವೆ ಇದು ಹಲವು ಕಾಯಿಲೆಗಳಿಗೆ ಪರಿಹಾರ ನೀಡುತ್ತದೆ ಎಂದು ಅನೇಕ ವೈಜ್ಞಾನಿಕ ಸಂಶೋಧನೆಗಳು ಹಾಗೂ ಸಂಶೋಧನಾ ವರದಿಗಳು ತಿಳಿಸಿವೆ."

ಎ.ಪಿ.ಜೆ. ಅಬ್ದುಲ್ ಕಲಾಂ.

ಎಂದು ದೇಶದ ಮಾಜಿ ರಾಷ್ಟ್ರಪತಿಗಳು ಹಾಗೂ ಅತ್ಯಂತ ವಿಜ್ಞಾನಿ ತಿಳಿಸಿದ್ದಾರೆ ಈ ನೋನಿ ಹಣ್ಣನ್ನು ಮುರಿಂಡಾ ಸಿಟ್ರಸ್ ಪೋಲಿಯ ಎಂದು ಕರೆಯುತ್ತಾರೆ ಸಾಮಾನ್ಯ ಭಾಷೆಯಲ್ಲಿ ಆಯುಷ್ ಫಲ ಅಥವಾ ಕಾಡು ಬಾರೆ ಹಣ್ಣು ಎಂದು ಕರೆಯಲಾಗುತ್ತದೆ ಇದು ಆಗ್ನೇಯ ಏಷ್ಯಾ ,ಸೌತ್ ಆಫ್ರಿಕಾ ,ಅಮೆರಿಕ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಈ ನೋನಿಯಲ್ಲಿ ಒಟ್ಟಾರೆಯಾಗಿ ಐದು ಬಗೆಯ ಹಣ್ಣುಗಳು ಸಿಗುತ್ತವೆ ಆದರೆ ಇದರಲ್ಲಿ ಒಂದು ಮಾತ್ರ ಔಷಧೀಯ ಗುಣ ಹೊಂದಿದೆ ಅಲ್ಲದೆ ಇದರ ಎಲೆ ಕಾಂಡ ಬೇರು ಪ್ರತಿಯೊಂದುರಲ್ಲೂ ಔಷಧೀಯ ಗುಣವಿದೆ. ಈ ಹಣ್ಣಿನಲ್ಲಿ ,160 ಕ್ಕೂ ಹೆಚ್ಚಿನ ಪೋಷಕಾಂಶಗಳಿವೆ. ಇದನ್ನು ಸರಿಸುಮಾರು 700 ಕ್ಕೂ ಅಧಿಕ ವರ್ಷಗಳಿಂದ ಪಾರಂಪರಿಕ ಔಷಧಿಯಾಗಿ ಬಳಸಲಾಗುತ್ತಿದೆ ಇದರಲ್ಲಿ ಸಾಮಾನ್ಯ ಔಷಧಿ ಹಣ್ಣಿಗಿಂತ 40 ಪಟ್ಟು ಝುರೋನಿನ್ ಅಂಶವಿದೆ ಇದು ದೇಹದಲ್ಲಿರುವ ಅನಾರೋಗ್ಯ ಪೀಡಿತ ಜೀವಕೋಶಗಳನ್ನು ಆರೋಗ್ಯವಂತ ಜೀವಕೋಶಗಳಾಗಿ ಪರಿವರ್ತಿಸುತ್ತದೆ ದೇಹದಲ್ಲಿರುವ ಪ್ರೋಟೀನ್ ಕಣಗಳನ್ನು ಹೆಚ್ಚು ಶಕ್ತಿಶಾಲಿಯಾಗಿಸುತ್ತದೆ ಅಲ್ಲದೇ ವಿಟಮಿನ್ B1 B2 B3 B5 B6 B12 ಹಾಗೂ ಕ್ಯಾಲ್ಸಿಯಂ ಪೋಟಾಸಿಯಂ ಮೆಗ್ನೀಷಿಯಂ ಕಬ್ಬಿಣಾಂಶ ಹೀಗೆ ಹಲವಾರು ಉತ್ತಮ ಅಂಶಗಳು ಈ ಹಣ್ಣಿನಲ್ಲಿದೆ.

ಈ ಹಣ್ಣಿನ ಜ್ಯೂಸ್ ಸೇವಿಸುವುದರಿಂದ ಪಿತ್ತ ಜನಕಾಂಗ ಹೃದಯ ಕಿಡ್ನಿ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತದೆ ಇದೆ ಅಲ್ಲದೆ ಈಗಾಗಲೇ ಕ್ಯಾನ್ಸರ್ ರೋಗಕ್ಕೆ ತುತ್ತಾದವರು ಈ ಜ್ಯೂಸ್ ಸೇವಿಸುವುದರಿಂದ ದೇಹದಲ್ಲಿ ಕ್ಯಾನ್ಸರ್ ಕೋಶಗಳು ಬೆಳೆದಂತೆ ತಡೆಯುತ್ತದೆ.

ಸಕ್ಕರೆ ಕಾಯಿಲೆ ಇರುವವರಿಗೆ ಈ ಜ್ಯೂಸ್ ಅಮೃತ ಎಂದರೆ ತಪ್ಪಾಗಲಾರದು ಇದು ರಕ್ತದಲ್ಲಿರುವ ಸಕ್ಕರೆಯ ಪ್ರಮಾಣವನ್ನ ನಿಯಂತ್ರಣದಲ್ಲಿಟ್ಟು ಮಧುಮೇಹ ನಿರ್ವಹಿಸಲು ಸಹಾಯ ಮಾಡುತ್ತದೆ ಇದರಲ್ಲಿರುವ ಆಂಟಿ ಆಕ್ಸಿಡೆಂಟ್ ಅಂಶಗಳು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿ ಶೀತ ತಲೆನೋವು ಜ್ವರ ಬರದಂತೆ ಕಾಪಾಡುತ್ತದೆ. ಆಧುನಿಕ ಯುಗದಲ್ಲಿ ನಮ್ಮ ಜೀವನ ಶೈಲಿ ಆಹಾರ ಪದ್ಧತಿ ಎಲ್ಲವೂ ಬದಲಾಗಿರುವುದರಿಂದ ನಮ್ಮನ್ನು ಸಾಮಾನ್ಯವಾಗಿ ಕಾಡುವ ಸಮಸ್ಯೆ ಎಂದರೆ ಅಜೀರ್ಣ ಇದಕ್ಕೆ ಯಾವುದೇ ವಯಸ್ಸಿನ ಮಿತಿ ಇಲ್ಲ ನಾವು ತಿನ್ನುವ ಆಹಾರವನ್ನು ಚೆನ್ನಾಗಿ ಜೀರ್ಣವಾಗುವಂತೆ ಈ ಜ್ಯೂಸ್ ನೋಡಿಕೊಳ್ಳುತ್ತದೆ. ಅಲ್ಲದೆ ದೇಹದ ಯಾವುದೇ ಭಾಗದಲ್ಲಿ ಊತವಿದ್ದರೆ ಅದನ್ನು ಸಹ ಕಡಿಮೆ ಮಾಡುತ್ತದೆ ಸಂಧಿವಾತದಿಂದ ಬಳಲುವವರಿಗೆ ಇದು ರಾಮಬಾಣ ಎಂದರೆ ತಪ್ಪಾಗಲಾರದು.


ಇಷ್ಟೆಲ್ಲ ಉತ್ತಮ ಅಂಶಗಳನ್ನು ಹೊಂದಿರುವ ನೋನಿ ಜ್ಯೂಸನ್ನು ಅತ್ಯಂತ ಹೆಚ್ಚಿನ ರಕ್ತದೊತ್ತಡ ಇರುವವರು ಮತ್ತು ಅದಕ್ಕೆ ಔಷಧಿ ಪಡೆಯುತ್ತಿರುವವರು ಕಿಡ್ನಿ ಸಮಸ್ಯೆ ಇರುವವರು ಗರ್ಭಿಣಿ ಮಹಿಳೆಯರು ಹಾಲುಣಿಸುವ ತಾಯಂದಿರು ವೈದ್ಯರ ಸಲಹೆ ಪಡೆದು ಬಳಸುವುದು ಸೂಕ್ತ ಇವರುಗಳು ಮಾತ್ರವಲ್ಲದೆ ಎಲ್ಲರೂ ವೈದ್ಯರ ಸಲಹೆ ಪಡೆದು ಬಳಸುವುದು ಸೂಕ್ತ.

ಇಷ್ಟೆಲ್ಲಾ ಅದ್ಭುತವಾಗಿರುವ ನೋನಿ ಹಣ್ಣನ್ನು ನಾವುಗಳೇ ಜ್ಯೂಸ್ ಮಾಡಿ ಕುಡಿಯಲು ಸಾಧ್ಯವಿಲ್ಲ ಮಾರುಕಟ್ಟೆಯಲ್ಲಿ ನಾನಾ ಬಗೆಯ ಕಂಪನಿಯ ಜ್ಯೂಸುಗಳು ಲಭ್ಯವಿದೆ ಆದರೆ ಅವುಗಳಲ್ಲಿ ಯಾವುದು ಉತ್ತಮವಾಗಿದೆ ಉತ್ತಮ ಹಣ್ಣನ್ನು ಬಳಸಿದ್ದಾರೆ ಸರಿಯಾದ ರೀತಿಯಲ್ಲಿ ತಯಾರಿಸಿದ್ದಾರೆ ಎಂದು ಪರಿಶೀಲಿಸಿ ಬಳಸುವುದು ಉತ್ತಮ.

ವರದಿ ಹಂಪಿ ಟೈಮ್ಸ್ ನದು ಅಯ್ಕೆ ನಿಮ್ಮದು.

**ಕವಿ ಮನಸು**

## ಮದನ ಲೀಲೆ



ನುಡಿಯು ಸುಳ್ಳಿದು ಅಲ್ಲ
ಎಡವಿ ಬಿದ್ದೆನು ನಲ್ಲ
ಹಿಡಿವ ನೆಪವನು ಮಾಡಿ
ಮುತ್ತಿಡುವೆಯಲ್ಲ॥

ಎಲ್ಲ ಬಲ್ಲೆನು ಜಾಣೆ
ಸೊಲ್ಲು ಏತಕೊ ಕಾಣೆ
ಬಲ್ಲೆ ನಿನ್ನಯ ಬಯಕೆ ಈ ಹೃದಯದಾಣೆ

ಬಹಳ ಅವಸರವಿತ್ತು
ಮಹಡಿ ಏರುವ ಹೊತ್ತು
ಕುಹಕ ಬೇಡವೊ ನಲ್ಲ ಬಳಸಿ ನೀನೆತ್ತು


ಸುಮವ ಸೇರಿದ ಮೇಲೆ
ಭ್ರಮರ ನಡೆಯಿದು ಕೇಳೆ
ಸಮಯ ಸರಸದ ಕಡೆಗೆ ಇದು ಮದನ
ಲೀಲೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 08-01-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.01 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.221 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.94 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8377 ಕ್ಯುಸೆಕ್ |
| ಸಾಮರ್ಥ್ಯ | 69.958 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಾಲ್ಯ ವಿವಾಹಕ್ಕೆ ತಳ್ಳಬೇಡಿ

### ತಹಶೀಲ್ದಾರ ವಿಶ್ವನಾಥ ಮುರಡಿ ಹೇಳಿಕೆ | ಬಾಲ್ಯ ವಿವಾಹ ಮುಕ್ತ ತಾಲ್ಲೂಕಾಗಲೂ ಪ್ರಾಮಾಣಿಕತೆ ನಿರ್ವಹಿಸಿ


■ ಹಂಪಿ ಟೈಮ್ಸ್ ಕೊಪ್ಪಳ

ಬಾಲ್ಯ ವಿವಾಹ ಮುಕ್ತ ತಾಲ್ಲೂಕನ್ನಾಗಿಸಲು ಎಲ್ಲ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದು ಕನಕಗಿರಿ ತಹಶೀಲ್ದಾರ ವಿಶ್ವನಾಥ ಮುರಡಿ ಹೇಳಿದರು.

ಜ.04 ರಂದು ಗಂಗಾವತಿ ತಾಲ್ಲೂಕು ಸಭಾಂಗಣದಲ್ಲಿ ಕನಕಗಿರಿ ತಾಲ್ಲೂಕಿನ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳೊಂದಿಗೆ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಎಲ್ಲಾ ದೇವಾಲಯಗಳಲ್ಲಿ ಮುಖ್ಯವಾಗಿ ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ದೇವಸ್ಥಾನಗಳಲ್ಲಿ ಸಾರ್ವಜನಿಕರಿಗೆ ಕಾಣಿಸುವಂತೆ ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ ಎಂಬ ಶಾಶ್ವತ ಗೋಡೆ ಬರಹವನ್ನು ಬರೆಯಿಸಲು ದೇವಸ್ಥಾನಗಳ ಮುಖ್ಯಸ್ಥರಿಗೆ ಸೂಚನೆ ನೀಡಬೇಕು. ಸಾಮೂಹಿಕ ವಿವಾಹ ಆಯೋಜಕರು ಶಾಶ್ವತ ಗೋಡೆ ಬರಹವನ್ನು ಬರೆಯಿಸುವುದನ್ನು ಸಹ ಒಂದು ಕಡ್ಡಾಯ ಅಂಶವಾಗಿ ಪರಿಗಣಿಸಬೇಕು. ಸಾಮೂಹಿಕ ವಿವಾಹ ಆಯೋಜಕರು ನೋಂದಣಿ ಮಾಡಿಸುವುದು ಕಡ್ಡಾಯವಾಗಿದ್ದು, ನೋಂದಣಿ ಮಾಡಿಸಿರುವ ಸಮಿತಿ/ಸಂಸ್ಥೆಗಳಿಗೆ ಮಾತ್ರವೇ ಸಾಮೂಹಿಕ ವಿವಾಹ ಆಯೋಜನೆಗೆ ಅನುಮತಿಸಬೇಕು. ನೋಂದಣಿಯಾಗದಿರುವಸಮಿತಿ/ಸಂಸ್ಥೆಗಳಿಗೆ ಸಾಮೂಹಿಕ ವಿವಾಹ ಆಯೋಜನೆಗೆ ಅನುಮತಿಯನ್ನು ನೀಡಬಾರದು. ಸಾಮೂಹಿಕ ವಿವಾಹ ಆಯೋಜಕರು ಕಡ್ಡಾಯವಾಗಿ ತಹಶೀಲ್ದಾರರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸಾಮೂಹಿಕ ವಿವಾಹ ಆಯೋಜನೆಗೆ ಅನುಮತಿಯನ್ನು ಪಡೆದುಕೊಂಡ ನಂತರವೇ ಸಾಮೂಹಿಕ ವಿವಾಹಗಳನ್ನು ಆಯೋಜಿಸತಕ್ಕದ್ದು, ತಪ್ಪಿದಲ್ಲಿ, ಬಾಲ್ಯವಿವಾಹ ಜರುಗಿದ್ದು ಕಂಡುಬಂದಲ್ಲಿ, ಸಾಮೂಹಿಕ ವಿವಾಹ ಆಯೋಜಕರನ್ನು ಸೇರಿದಂತೆ ಸಂಬಂಧಿಸಿದವರ ವಿರುದ್ಧ ಪ್ರಕರಣವನ್ನು ದಾಖಲಿಸುವಂತೆ ಅಧಿಕಾರಿಗಳಿಗೆ ಮತ್ತು ಪೊಲೀಸರಿಗೆ ಸೂಚಿಸಿದರು.

ವಿವಾಹದ ಸಲುವಾಗಿ ಯಾರಾದರು ನಕಲಿ ಶಾಲಾ ದೃಢೀಕರಣ ಪತ್ರವನ್ನು ನೀಡಿದಲ್ಲಿ ಅಂತಹ ಶಾಲೆ ಹಾಗೂ ಮುಖ್ಯೋಪಾಧ್ಯಾಯರ ವಿರುದ್ಧ ಶಿಕ್ಷಣ ಇಲಾಖೆ ಕಾನೂನು ರೀತ್ಯಾ ಸೂಕ್ತ ಕ್ರಮಗಳನ್ನು ಜರುಗಿಸಬೇಕು. ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ಮೇಲಾಗುವ ಯಾವುದೇ ರೀತಿಯ ಅಪರಾಧಗಳನ್ನು ತಡೆಗಟ್ಟಲು ಕರ್ನಾಟಕ ರಾಜ್ಯ ಸರಕಾರವು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016ರಡಿಯಲ್ಲಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ಜಾರಿಗೊಳಿಸಿದ್ದು, ದಿನಾಂಕ:03.04.2016 ರಿಂದ ನೀತಿಯು ಅನುಷ್ಠಾನದಲ್ಲಿದ್ದು, ನೀತಿಯ ಮಾರ್ಗಸೂಚಿಗಳನ್ನು ಎಲ್ಲಾ ಶೈಕ್ಷಣಿಕಸಂಸ್ಥೆಗಳಲ್ಲಿಅನುಷ್ಠಾನಗೊಳಿಸುವುದು ಕಡ್ಡಾಯವಾಗಿದೆ. ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಕಾನೂನು ರೀತ್ಯಾ ಸೂಕ್ತ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ಶಾಲಾ ಮಕ್ಕಳಿಗೆ ಮಕ್ಕಳ ಹಕ್ಕುಗಳು ಮತ್ತು ಕಾನೂನುಗಳ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.



ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ರಡಿಯಲ್ಲಿ ಬಾಲಭಿಕ್ಷಾಟನೆ ಶಿಕ್ಷಾರ್ಹ ಅಪರಾಧವಾಗಿದೆ. ತಾಲೂಕಿನಲ್ಲಿ ಬಾಲ ಭಿಕ್ಷಾಟನೆ ಪಿಡುಗು ಇದ್ದು, ಸಮಾಜ ಕಲ್ಯಾಣ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಗಳು ಅನಿರೀಕ್ಷಿತ ದಾಳಿಗಳನ್ನು ಕೈಗೊಳ್ಳುವಂತೆ ಸೂಚಿಸಿದ ಅವರು, ಬಾಲ ಮತ್ತು ಕಿಶೋರ ಕಾರ್ಮಿಕರ ಪತ್ತೆಗಾಗಿ ನಿಯಮಿತವಾಗಿ ಅನಿರೀಕ್ಷಿತ ದಾಳಿಗಳನ್ನು ಆಯೋಜಿಸುವುದು, ಪತ್ತೆಯಾದ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಪೋಷಣೆ ಮತ್ತು ರಕ್ಷಣೆಗೆ ಹಾಜರಪಡಿಸುವುದು ಕಡ್ಡಾಯವೆಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಸ್ನೇಹಿ ವಾತಾವರಣ ಮತ್ತು ಮಕ್ಕಳ ಪರವಾದ ಪಂಚಾಯತ್‌ಗಳನ್ನಾಗಿಸಲು ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಕನಿಷ್ಠ 03 ತಿಂಗಳಿಗೊಮ್ಮೆ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಗಳ ಸಭೆಯನ್ನು ಮತ್ತು ಮಕ್ಕಳ ಹಕ್ಕುಗಳ ಗ್ರಾಮಸಭೆಯನ್ನು ಕಡ್ಡಾಯವಾಗಿ ಆಯೋಜಿಸುವಂತೆ ತಾಲೂಕು ಪಂಚಾಯತ್ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಗಂಗಾವತಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶರಣಪ್ಪ ನಾಯ್ಕ, ಕನಕಗಿರಿ ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಿ, ವೈದ್ಯಾಧಿಕಾರಿ ಡಾ.ಗೌರಿಶಂಕರ, ಕಾರ್ಮಿಕ ನಿರೀಕ್ಷಕರಾದ ಗೋಪಾಲ ಧೂಪದ್, ಕನಕಗಿರಿ ಶಿಕ್ಷಣ ಸಂಯೋಜಕರಾದ ಅಂಜನಯ್ಯ, ಗಂಗಾವತಿ ಗ್ರಾಮೀಣ ಠಾಣೆ ಎಎಸ್‌ಐ ಪ್ರಕಾಶ ಉಮಚಗಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜ ಕಾರ್ಯಕರ್ತರಾದ ರವಿ ಪವಾರ್, ಯಮನಮ್ಮ, ಕನಕಗಿರಿ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಚಂದ್ರಕಲಾ ಹೆಗಡೆ, ಪೋಷಣ್ ತಾಲ್ಲೂಕು ಸಂಯೋಜಕರಾದ ಯಮನೂರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿಕಲಚೇತನರ ಕಲ್ಯಾಣ ಇಲಾಖೆಯಿಂದ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2023-24ನೇ ಸಾಲಿಗೆ ಇಲಾಖೆಯ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯ ಯೋಜನೆಗಳಾದ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ, ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ಯೋಜನೆ, ಸಾಧನ ಸಲಕರಣೆಗಳ ಯೋಜನೆ, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ, ದೃಷ್ಟಿದೋಷ ಹೊಂದಿರುವ ವಿಕಲಚೇತನರಿಗೆ ಬ್ರೈಲ್ ಕಿಟ್ ಯೋಜನೆಗಳಿಗೆ ಆನ್‌ಲೈನ್ ಮೂಲಕ ಅರ್ಹ ವಿಕಲಚೇತನರು ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಮತ್ತು ಸೇವಾಸಿಂಧು (https://sevasindhu.karnataka.gov.in/Sevasindhu/Kannada) ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಜನವರಿ 30 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಿದ ಒಂದು ಝರಾಕ್ಸ್ ಪ್ರತಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ ಆವರಣ, ಕೊಠಡಿ ಸಂಖ್ಯೆ 31,32 ರಿಲಾಯನ್ಸ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ ರಸ್ತೆ, ಕೊಪ್ಪಳ ಈ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಎಂ.ಆರ್.ಡಬ್ಲ್ಯು ಗಳಾದ ಕೊಪ್ಪಳ-ಜಯಶ್ರೀ: 9980126391, ಯಲಬುರ್ಗಾ-ಬಸನಗೌಡ: 9964803047, ಕುಷ್ಟಗಿ-ಚಂದ್ರಶೇಖರ: 9916308585, ಗಂಗಾವತಿ-ಮಂಜುಳಾ: 7975398202 ಇವರನ್ನು ಹಾಗೂ ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿ.ಆರ್.ಡಬ್ಲ್ಯೂ ಹಾಗೂ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯು.ಆರ್.ಡಬ್ಲ್ಯೂಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

# ಜ.10ಕ್ಕೆ ವಾಕ್ ಇನ್ ಇಂಟರ್‌ವ್ಯೂವ್

■ ಹಂಪಿ ಟೈಮ್ಸ್ ಕೊಪ್ಪಳ

ನಗರದ ಭೂಮಿ ಐಎಎಸ್ ಮತ್ತು ಕೆಎಎಸ್ ಸ್ಟಡಿ ಸರ್ಕಲ್ ಅವರಿಂದ ಜನವರಿ 10 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 01.30 ಗಂಟೆಯವರೆಗೆ ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಆಯೋಜಿಸಲಾಗಿದೆ.

ಅಶೋಕ ಸರ್ಕಲ್ ಹತ್ತಿರವಿರುವ ಲಯನ್ಸ್ ಆಸ್ಪತ್ರೆ ಕಾಂಪ್ಲೆಕ್ಸ್‌ನ ಭೂಮಿ ಸ್ಟಡಿ ಸರ್ಕಲ್ ಕಚೇರಿಯಲ್ಲಿ ವಾಕ್ ಇನ್ ಇಂಟರ್‌ವ್ಯೂವ್ ನಡೆಯಲಿದ್ದು, ನುರಿತ ಉಪನ್ಯಾಸಕ/ಕಿ ಹುದ್ದೆಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ. ಬಿ.ಎ.-ಬಿಎಡ್ ಅಥವಾ ಎಂ.ಎ.-ಬಿಎಡ್, ಬಿ.ಎಸ್‌ಸಿ.-ಬಿಎಡ್(ಕೆಮಿಸ್ಟ್ರಿ) ಅಥವಾ ಎಂ.ಎಸ್‌ಸಿ.-ಬಿಎಡ್(ಕೆಮಿಸ್ಟ್ರಿ), ಬಿ.ಎಸ್‌ಸಿ.-ಬಿಎಡ್(ಫಿಜಿಕ್ಸ್) ಅಥವಾ ಎಂ.ಎಸ್‌ಸಿ.-ಬಿಎಡ್(ಫಿಜಿಕ್ಸ್) ವಿದ್ಯಾರ್ಹತೆ ಹೊಂದಿರುವ, ಕನಿಷ್ಠ 1 ರಿಂದ 2 ವರ್ಷಗಳ ಸೇವಾನುಭವ ಹೊಂದಿರುವ, 21 ರಿಂದ 30 ವರ್ಷ ವಯೋಮಾನದ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಪಾಲ್ಗೊಂಡು ಉದ್ಯೋಗದ ನೆರವನ್ನು ಪಡೆಯಬಹುದು. ಆಸಕ್ತ ನಿರುದ್ಯೋಗಿ ಯುವಕ ಮತ್ತು ಯುವತಿಯರು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳ ಪ್ರತಿಗಳು, ಆಧಾರ್ ಕಾರ್ಡ್ ಪ್ರತಿ, ಬಯೋಡೇಟಾ ಹಾಗೂ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ, ಮೊ.ನಂ: 8105693234 ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

# ಸಂತ್ರಸ್ತರಿಗೆ ಪರಿಹಾರ ಒದಗಿಸಿ

### ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ | ದೌರ್ಜನ್ಯ ಪ್ರಕರಣಗಳಲ್ಲಿ ಪರಿಹಾರ ಒದಗಿಸಲು ಕ್ರಮ ವಹಿಸಿ



■ ಹಂಪಿ ಟೈಮ್ಸ್ ಕೊಪ್ಪಳ

ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಅಗತ್ಯ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹೇಳಿದರು.

ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ದೌರ್ಜನ್ಯ ನಿಯಂತ್ರಣ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೌರ್ಜನ್ಯ, ಗಲಭೆ ಪ್ರಕರಣಗಳಲ್ಲಿ ತನಿಖೆಯಲ್ಲಿ ಸಂತ್ರಸ್ತರೆಂದು ಸಾಬೀತಾದವರಿಗೆ ಸರ್ಕಾರದಿಂದ ನಿಗದಿಪಡಿಸಿದ ಪರಿಹಾರವನ್ನು ಒದಗಿಸಬೇಕು. ಪರಿಶಿಷ್ಟ ಜಾತಿ, ಪಂಗಡಗಳ ಕಾಲೋನಿಯಲ್ಲಿ ಅಗತ್ಯವಿರುವ ರಸ್ತೆ, ಕುಡಿಯುವ ನೀರು, ಶೌಚಾಲಯ, ಚರಂಡಿ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ದೂರು ಸಲ್ಲಿಸಲು ಬಂದಾಗ ಯಾವುದೇ ಕಾರಣ ನೀಡದೆ ದೂರು ಸ್ವೀಕರಿಸಿ, ಪ್ರಕರಣ ದಾಖಲಿಸಬೇಕು. ಪೊಲೀಸ್ ಠಾಣೆಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ನಿಯಮಾನುಸಾರ ವಿಲೇ ಮಾಡಲು ಕ್ರಮ ವಹಿಸಬೇಕು. ಸಮುದಾಯದ ಭವನಗಳ ನಿರ್ಮಾಣ, ಅಂಗನವಾಡಿಗಳ ದುರಸ್ಥಿ ಸೇರಿದಂತೆ ಯಾವುದೇ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಮಾತನಾಡಿ, ಜಿಲ್ಲೆಯಲ್ಲಿ ಯಾವುದೇ ಪೊಲೀಸ್ ಠಾಣೆಯಲ್ಲಿ ದಾಖಲಾದ ದೌರ್ಜನ್ಯ ಪ್ರಕರಣಗಳಲ್ಲಿ ವಿಳಂಬವಿಲ್ಲದೆ ತನಿಖೆ ನಡೆಯುತ್ತಿದ್ದು, ಸಂತ್ರಸ್ತರಿಗೆ ಅಗತ್ಯ ಪರಿಹಾರ ಒದಗಿಸಲಾಗಿದೆ. ಪ್ರತಿ ಪೊಲೀಸ್ ಠಾಣೆಯಲ್ಲಿಯೂ ತಿಂಗಳ ಎರಡನೇ ಭಾನುವಾರದಂದು ಸಭೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ರಾಜು ತಳವಾರ ಮಾತನಾಡಿ, ಕಳೆದ ಸಭೆಯಲ್ಲಿ ಚರ್ಚಿಸಿದಂತೆ ಕೊಪ್ಪಳ ಕೇಂದ್ರ ಸ್ಥಾನದಲ್ಲಿ ಬಾಬು ಜಗಜೀವನರಾಂ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಕಾಮಗಾರಿಯ ಅಂದಾಜು ಪತ್ರಿಕೆಯು ಸಲ್ಲಿಕೆಯಾಗಿದ್ದು, ಕೇಂದ್ರ ಕಚೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯ ಪ್ರಾರಂಭಿಸುವ ಸಲುವಾಗಿ ಮೂಲಭೂತ ಸೌಕರ್ಯಗಳು ಮತ್ತು ಕಟ್ಟಡವನ್ನು ಭವನಕ್ಕಾಗಿ ಉಪಯೋಗಿಸುವಾಗ ಅನುಕೂಲವಾಗುವಂತ ಸ್ನಾನಗೃಹಗಳ ನಿರ್ಮಾಣಕ್ಕಾಗಿ ಕೆಆರ್‌ಐಡಿಎಲ್ ಕೊಪ್ಪಳ ಅವರು ರೂ.10 ಲಕ್ಷಗಳ ಅಂದಾಜು ಪತ್ರಿಕೆಯನ್ನು ಸಲ್ಲಿಸಿದ್ದು, ಅದರನ್ವಯ ತಾಲ್ಲೂಕು ಕಚೇರಿ ಪ್ರಾರಂಭಿಸಲು ಇಲಾಖೆಯ ಆಯುಕ್ತರಿಗೆ ಅನುಮತಿಗಾಗಿ ಕೋರಲಾಗಿದೆ. ಸಮಿತಿ ಸದಸ್ಯರು ಪ್ರಸ್ತಾಪಿಸಿದ ವಿವಿಧ ವಿಷಯಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

2023ನೇ ಕ್ಯಾಲೆಂಡರ್ ವರ್ಷದಲ್ಲಿ ಒಟ್ಟು 37 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, 9 ಪ್ರಕರಣಗಳು ಎಫ್‌ಐಆರ್, 22 ಪ್ರಕರಣಗಳು ಚಾರ್ಜ್‌ಶೀಟ್ ಹಂತದಲ್ಲಿದ್ದು, ಒಟ್ಟು 31 ಪ್ರಕರಣಗಳಲ್ಲಿ ರೂ.80,75,000 ಗಳ ಪರಿಹಾರಧನವನ್ನು ಮಂಜೂರಿಸಲಾಗಿದೆ. ಜಿಲ್ಲಾ ಹಂತದಲ್ಲಿ ಪರಿಹಾರ ಮಂಜೂರಾತಿಗಾಗಿ 6 ಪ್ರಕರಣಗಳು ಬಾಕಿ ಇವೆ. ಉಳಿದಂತೆ ಇದೇ ಕ್ಯಾಲೆಂಡರ್ ವರ್ಷದಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಾರಂಭಿಕ ಶಿಲ್ಕು 268 ಹಾಗೂ 33 ಹೊಸ ಪ್ರಕರಣಗಳನ್ನು ಒಳಗೊಂಡಂತೆ ಒಟ್ಟು 301 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 58 ರಲ್ಲಿ ಬಿಡುಗಡೆ, 2 ರಲ್ಲಿ ಶಿಕ್ಷೆ, ಇತರೆ 2 ಸೇರಿದಂತೆ 62 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. 206 ಪ್ರಕರಣಗಳು ಬಾಕಿ ಉಳಿದಿವೆ. ದಾಖಲಾದ ದೌರ್ಜನ್ಯ ಪ್ರಕರಣಗಳಲ್ಲಿ ವಿಳಂಬವಿಲ್ಲದೆ ಪರಿಹಾರಧನ ಮಂಜೂರಾತಿಗೆ ಕ್ರಮ ವಹಿಸಿ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಕಾವ್ಯಾರಾಣಿ, ಕೊಪ್ಪಳ ನಗರಸಭೆ ಪೌರಾಯುಕ್ತರಾದ ಗಣಪತಿ, ಕುಷ್ಟಗಿ ತಹಶೀಲ್ದಾರ ಶೃತಿ, ದೌರ್ಜನ್ಯ ನಿಯಂತ್ರಣ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ದ್ಯಾಮಣ್ಣ ಗೊಂದಿ, ಚಂದಾಲಿಂಗಪ್ಪ ಮಾದರ, ಸುಂಕಪ್ಪ ಕೆ.ಮಾಲಗಿತ್ತಿ, ಮರಳಸಿದ್ದಪ್ಪ ಪೂಜಾರ, ಮಾರುತಿ ಚಾಮಲಾಪುರ, ಚಂದ್ರಪ್ಪ ತಳೂರ, ಮಾಲತಿ ನಾಯಕ, ಸತೀಶ ಮೋರನಾಳ, ಸಿದ್ದು ಮಣ್ಣಿನವರ ಸೇರಿದಂತೆ ಇನ್ನಿತರ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

14 ಭಾಷೆಗಳಲ್ಲಿ ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಸ್ವಚ್ಛ ಹಾಗು ಸುಂದರ ನಗರಕ್ಕಾಗಿ ಕೈಜೋಡಿಸಿ

### ಜಿಲ್ಲಾ ನಗರಾಭಿವೃದ್ಧಿ ಕೋಶ ಜಗದೀಶ್ ಗಂಗಣ ಹೇಳಿಕೆ



■ ಹಂಪಿ ಟೈಮ್ಸ್ ರಾಯಚೂರು

ಸ್ವಚ್ಛ ಮತ್ತು ಸುಂದರ ರಾಯಚೂರು ನಗರಕ್ಕಾಗಿ ನಗರಸಭೆಯಿಂದ ವಾರಕ್ಕೆ ಒಂದು ವಾರ್ಡನಂತೆ ಪ್ರತಿಯೊಂದು ವಾರ್ಡಗಳನ್ನು ಸಂಪೂರ್ಣ ಸ್ವಚ್ಛತೆ ಮಾಡಲು ನಿಮ್ಮೆಲ್ಲರ ಸಹಕಾರದೊಂದಿಗೆ ಜಿಲ್ಲಾಡಳಿತ ವಿಶೇಷ ಪ್ರಯತ್ನವನ್ನ ಮಾಡುತ್ತಿದೆ. ಈ ಪ್ರಯತ್ನಕ್ಕೆ ರಾಯಚೂರಿನ ಪ್ರತಿಯೊಂದು ಸಂಘ-ಸಂಸ್ಥೆಗಳು ಹಾಗೂ ಎಲ್ಲಾ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ನೀವೆಲ್ಲರು ಸ್ವಚ್ಚ ಮತ್ತು ಸುಂದರ ನಗರಕ್ಕಾಗಿ ನಮ್ಮೊಂದಿಗೆ ಕೈಜೋಡಿಸಬೇಕೆಂದು ಜಿಲ್ಲಾ ನಗರಾಭಿವೃದ್ಧಿ ಕೋಶ ಜಗದೀಶ್ ಗಂಗಣ್ಣ ನವರ್ ಹಾಗೂ ನಗರಸಭೆಯ ಪೌರಾಯುಕ್ತರಾದ ಗುರು ಸಿದ್ದಯ್ಯ ಹಿರೇಮಠ ಅವರು ಮನವಿ ಮಾಡಿಕೊಂಡರು.

ರಾಯಚೂರಿನ ಪ್ರಜಾಪಿತ ಬ್ರಹ್ಮಕುಮಾರಿಯ ಈಶ್ವರ್ಯ ವಿಶ್ವ ವಿದ್ಯಾಲಯದಲ್ಲಿ ನಗರಸಭೆ ಹಾಗೂ ಜಿಲ್ಲಾ ನಗರ ಅಭಿವೃದ್ಧಿ ಕೋಶ ವತಿಯಿಂದ ಆಯೋಜಿಸಿದ್ದ ಸಂಘ-ಸಂಸ್ಥೆಯ ಮುಖಂಡರ ಹಾಗೂ ಸಾರ್ವಜನಿಕರ ಅಭಿಪ್ರಾಯ, ಸಲಹಾ ಸಭೆಯಲ್ಲಿ ಮಾತನಾಡಿದರು. ರಾಯಚೂರು ನಗರದ ಸಂಪೂರ್ಣ ಸ್ವಚ್ಛತೆಗಾಗಿ ನಮ್ಮೊಂದಿಗೆ ನೀವೆಲ್ಲರೂ ಕೈಜೋಡಿಸಬೇಕಾಗಿದೆ.

ನಗರಸಭೆ ಹಾಗೂ ಜಿಲ್ಲಾಡಳಿತ ಈಗಾಗಲೇ ಹಲವಾರು ಪ್ರಯತ್ನಗಳ ಮೂಲಕ ರಾಯಚೂರಿನ ಸಂಪೂರ್ಣ ಸ್ವಚ್ಛತೆಗಾಗಿ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಮುಂದೆಯೂ ಪ್ರತಿ ವಾರ್ಡನಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ರೂಪಿಸಲಾಗುತ್ತಿದೆ.

ರಾಯಚೂರು ನಗರವನ್ನು ನಮ್ಮ ಮನೆಯಂತೆ ಕಂಡು ಸ್ವಚ್ಚತೆಯಿಂದ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರದು. ಸ್ವಚ್ಚತಾ ಕಾರ್ಯಕ್ರಮಕ್ಕೆ ಸ್ವಯಂಪ್ರೇರಿತವಾಗಿ ನಗರಸಭೆಯೊಂದಿಗೆ ಕೈಜೋಡಿಸಬೇಕು. ರಾಯಚೂರು ನಗರದ ಹಸಿರೀಕರಣದೊಂದಿದೆ ಎಲ್ಲಾ ವಾರ್ಡ್ ಗಳಲ್ಲಿಯೂ ಸ್ವಚ್ಚತೆ ಕಾಪಾಡಬೇಕು ಜಿಲ್ಲಾಡಳಿತದ ಉದ್ದೇಶವಾಗಿದೆ ಎಂದು ತಿಳಿಸಿದರು. ಪ್ರತಿಯೊಂದು ವಾರ್ಡ ನ ಸ್ವಚ್ಚತೆಗಾಗಿ ಲಾಟರಿ ಮೂಲಕ ವಾರ್ಡ ಗಳನ್ನು ಆಯ್ಕೆ ಮಾಡಲಾಗುವುದು. ಲಾಟರಿಯಲ್ಲಿ ಆಯ್ಕೆಯಾದ ವಾರ್ಡ್ ನ ಸಂಪೂರ್ಣ ಸ್ವಚ್ಚತೆಗಾಗಿ ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು. ಇದರಂತೆ ನಡೆದ ಸಲಹಾ ಸಭೆಯಲ್ಲಿ, ಮೊದಲಿಗೆ ಎಲ್ಲಾ ವಾರ್ಡಳ ಹೆಸರನ್ನು ಬರೆದು ಒಂದು ಡಬ್ಬಿಯಲ್ಲಿ ಹಾಕಿ ಸಾರ್ವಜನಿಕರ ಎದುರು ಚೀಟಿ ಎತ್ತಿದರು ಮೊದಲಿಗೆ ಅರಬ್ ಮೊಹಲ್ಲಾ ವಾರ್ಡ್ ಆಯ್ಕೆಯಾಗಿದೆ. ವಾರ್ಡ್ ನ ಸಾರ್ವಜನಿಕರು ನಮ್ಮೊಂದಿಗೆ ಸ್ವಚ್ಚತಾ ಅಭಿಯಾನದಲ್ಲಿ ಕೈಜೋಡಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಜಾ ಪೀತ ಬ್ರಹ್ಮ ಕುಮಾರಿ ವಿಶ್ವ ವಿದ್ಯಾಲಯದ ಸ್ಮಿತಾ ಅಕ್ಕನವರು ಮಾತನಾಡಿ, ನಗರ ಸಭೆ ರಾಯಚೂರಿನ ಸಂಪೂರ್ಣ ಸ್ವಚ್ಛತೆಗಾಗಿ ವಿಶೇಷ ಪ್ರಯತ್ನ ಮಾಡುತ್ತಿದೆ ನಾವೆಲ್ಲರು ಸ್ವಚ್ಚತಾ ಕಾರ್ಯದಲ್ಲಿ ಕೈಜೋಡಿಸುವ ಮೂಲಕ ರಾಜ್ಯದಲ್ಲಿ ನಗರವನ್ನು ಸ್ವಚ್ಚ ನಗರವನ್ನಾಗಿ ಮಾಡಬೇಕೆಂದು ತಿಳಿಸಿದರು. ವಿವಿಧ ಸಂಘ-ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ನಗರಸಭೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.




# ಕೈಗಾರಿಕೆಗೆ ಕೃಷಿಭೂಮಿ ನೀಡಬೇಡಿ

## ರಾಜ್ಯ ರೈತಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ಹೇಳಿಕೆ | ರೈತರ ಸಾಲ ಮನ್ನಾ ಮಾಡದೆ ಕಾರ್ಪೋರೇಟರ್‌ಗಳ ಸಾಲ ಮನ್ನಾ ಆರೋಪ

**■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ರೈತರ ಕೃಷಿಭೂಮಿಗಳು ಕೃಷಿಗೆ ಯೋಗ್ಯವಾಗಿರುವಂತಹವು, ಅವುಗಳನ್ನು ಕೈಗಾರಿಕೆಗೆ ಬಳಕೆಗೆಯಾಗಬಾರದು ಎಂದು ಕರ್ನಾಟಕ ರಾಜ್ಯ ರೈತಸಂಘದ ರಾಜ್ಯಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ಹೇಳಿದರು.

ಪಟ್ಟಣದ ನಾಣಿಕೇರಿ ವೃತ್ತದಲ್ಲಿ, ಕರ್ನಾಟಕ ರಾಜ್ಯ ರೈತಸಂಘದ ನೇತೃತ್ವದಲ್ಲಿ, ನೀಡುವುದನ್ನು ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು. ದೇಶದಲ್ಲಿ ಅಕ್ರಮ ಸಕ್ರಮ ಅಡಿಯಲ್ಲಿ ಸಲ್ಲಿಕೆಯಾದ ಫಾರಂ .ನಂ. 50,53,57ರ ಹಕ್ಕುಪತ್ರ ನೀಡಲು ಹಾಗು ಕೆಐಡಿಬಿ ಮೂಲಕ ರೈತರ ಜಮೀನುಗಳನ್ನು ಸುಮಾರು 3 ಕೋಟಿ ರೈತ ಕುಟುಂಬಗಳಿವೆ, ರಾಜ್ಯದಲ್ಲಿ 3.340 ಲಕ್ಷ ರೈತ ಕುಟುಂಬಗಳಿವೆ. ಅವರ ಸಾಲ ಕೇವಲ 7ಲಕ್ಷ. ಕೋಟಿರೂ ಸಾಲವಿರಬಹುದು, ದೇಶದಲ್ಲಿ ಸುಮಾರು 280 ರಷ್ಟು ಕಾರ್ಪೋರೇಟ್ ಸಂಸ್ಥೆಗಳಿವೆ, ಅವರ ಸಾಲ 14 ಲಕ್ಷ ಕೋಟಿ ರೂ.ಗಳ ಸಾಲವನ್ನು ಕೇಂದ್ರಸರ್ಕಾರ ಮನ್ನಾಮಾಡಿವೆ. ರೈತರ ಸಾಲಮನ್ನಾ ಮಾಡದೆ, ಕಾರ್ಪೋರೇಟ್ ಸಂಸ್ಥೆಗಳ ಸಾಲಮಾಡಿವೆ ಎಂದು ಆಪಾದಿಸಿದರು.



ರಾಜ್ಯ ಕಾರ್ಯದರ್ಶಿ ಬಿ.ಗೋಣಿಬಸಪ್ಪ ಮಾತನಾಡಿ, ರಾಜ್ಯದಲ್ಲಿನ ಸರ್ಕಾರಕ್ಕೆ ಪಂಚೇಂದ್ರಿಯಗಳಿಲ್ಲ. ಆದ್ದರಿಂದ ರೈತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ತಲಾ–ತಲಾಂತರಗಳಿಂದ ರೈತರು ಉಳುಮೆಮಾಡಿದ ಜಮೀನುಗಳಿಗೆ ಪಟ್ಟ ನೀಡದೆ ಹಾಗು ಕೆಐಡಿಬಿ ಮೂಲಕ ರೈತರ ಜಮೀನುಗಳನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ನೀಡಲು ಮುಂದಾಗಿರುವುದು ಮಾತೃದ್ರೋಹಿ ಸರ್ಕಾರ ಎಂದು ದೂರಿದರು.

ಹೊಸಪೇಟೆ ತಾ.ನ. ರೈತರಿಗೆ ಅಕ್ರಮ ಸಕ್ರಮ ಅಡಿಯಲ್ಲಿ ಸಲ್ಲಿಕೆ ಯಾದ ಫಾರಂ.ನಂ.50,53,57ರ ಹಕ್ಕುಪತ್ರ ನೀಡುತ್ತಿಲ್ಲ, ಹೊಸಪೇಟೆಯ ಮಾಜಿಶಾಸಕ ಆನಂದ್ ಸಿಂಗರ ಅವಧಿಯಲ್ಲಿ ತಮ್ಮ ಕ್ಷೇತ್ರದ ರೈತರಿಗೆ 50,53,57ರ ಹಕ್ಕುಪತ್ರ ಕೊಡಿಸಿದ್ದಾರೆ. ಹ.ಬೊ.ಹಳ್ಳಿ ಕ್ಷೇತ್ರದ ಶಾಸಕರ ಇಚ್ಛಾಶಕ್ತಿಯ ಕೊರತೆಯಿಂದ ಈ ಭಾಗದ ರೈತರಿಗೆ ಫಾರಂನಂ. 50,53,57ರ ಹಕ್ಕುಪತ್ರ ದೊರೆಯುತ್ತಿಲ್ಲ ಎಂದು ದೂರಿದರು.

ನಂತರ ಪಟ್ಟಣದ ನಾಡಕಾರ್ಯಾಲಯದ ಉಪತಹಶೀಲ್ದಾರ ನಾಗರಾಜ್ ರವರಿಗೆ ಎರಡು ಹಕ್ಕೊತ್ತಾಯಗಳ ಮನವಿಯನ್ನು ರೈತರು ಸಲ್ಲಿಸಿದರು. ಈ ಸಂಧರ್ಭದಲ್ಲಿ ಬಿ.ಸರದಾರ, ವೀರುಪಾಕ್ಷ, ರಜಾಕ್ ಸಾಬ್, ಕೊಟ್ಯಾಳಿ ಹುಸೇನ್ ಸಾಬ್, ಗುಂಡಾಕೃಷ್ಣ, ಮನ್ಸೂರ್ ಸಾಬ್, ವೇಣುಗೊಪಾಲ, ಕಲ್ಲಾಳಪರಶುರಾಮ, ಗೋವಿಂದರಪರಶುರಾಮ, ಪಾಂಡುರಂಗನಾಯ್ಕ್, ಕಾಶಿಂಸಾಬ್, ನಾರಾಯಣನಾಯ್ಕ್, ಹಾಲಸ್ವಾಮಿ ಸೇರಿದಂತೆ ಇತರರಿದ್ದರು.

## ಮೈಕ್ರೋ ನ್ಯೂಸ್

### ಹಂಪಿ ಉತ್ಸವ: ಅಧಿಕಾರಿಗಳ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹಂಪಿ ಉತ್ಸವ ಹಿನ್ನೆಲೆಯಲ್ಲಿ ಸಿದ್ದತೆಗಾಗಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಸಭೆಯಲ್ಲಿ, ಹಂಪಿ ಉತ್ಸವದ ವಿಶೇಷ ಆಕರ್ಷಣೀಯ ವೇದಿಕೆಗಳ ನಿರ್ಮಾಣ, ಕಲಾ ತಂಡಗಳ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪಾರ್ಕಿಂಗ್ ವ್ಯವಸ್ಥೆ, ಸಾರಿಗೆ ಸೌಕರ್ಯ, ಮಾಧ್ಯಮ ಕೇಂದ್ರ ಸ್ಥಾಪನೆ, ಆಹಾರ ಮತ್ತು ಕುಡಿಯುವ ನೀರಿನ ವ್ಯವಸ್ಥೆ, ವಸತಿ ವ್ಯವಸ್ಥೆ ಸೇರಿದಂತೆ ನಾನಾ ಕಾರ್ಯಸಿದ್ಧತೆಯ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಹಂಪಿ ಉತ್ಸವಕ್ಕೆ ಅದರದೇ ಮಹತ್ವವಿದೆ. ಜನರು ಬಯಸುವ ಹಾಗೆ ಉತ್ಸವ ನಡೆಯಬೇಕು. ಕಾರ್ಯ ಹಂಚಿಕೆಯಂತೆ ಆಯಾ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಣೆ ಮಾಡಬೇಕು ಎಂದು ಸೂಚಿಸಿದರು.

ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯಶೈಲಿ, ಕಾರ್ಯ ಸಾಮರ್ಥ್ಯ ಪರೀಕ್ಷೆಯಂತಿರುವ ಉತ್ಸವವು ಈ ಬಾರಿ ದಾಖಲಾರ್ಹ ರೀತಿಯಲ್ಲಿ ನಡೆಯುವಂತಾಗಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ಎಸಿ ಮಹದ್‌ಅಲಿ ಅಕ್ರಮ ಷಾಹ, ಡಿವೈಎಸ್ಪಿ ಮಂಜುನಾಥ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಈರಣ್ಣ ಬಿರಾದಾರ, ಆರ್ ಟಿಓ ವಸಂತ ಚವ್ಹಾಣ್, ಸಾರಿಗೆ ಸಂಸ್ಥೆಯ ಆರ್ ಎಲ್ ಕುಮಾರಸ್ವಾಮಿ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ, ಪ್ರವಾಸೋದ್ಯಮ ಇಲಾಖೆಯ ಪ್ರಭುಲಿಂಗ, ಆರೋಗ್ಯ ಇಲಾಖೆಯ ಎಂಪಿ ದೊಡ್ಡಮನಿ, ಬಿಇಓ ಹೆಚ್ ಝಾಕಿರ್ ಹುಸೇನ್, ಅಧಿಕಾರಿಗಳಾದ ಮೌನೇಶ ವಿ.ಬಿ., ಕೃಷ್ಣ ಕೆ.ಎಂ., ಆರ್ ಆರ್ ಅತ್ತಿ, ನಾಗರಾಜ ಹೆಚ್ ಸೇರಿದಂತೆ ಇತರರು ಇದ್ದರು.

### ಹರಕೆ ತೀರಿಸಿದ ಭಕ್ತರು



ಮೊದಲ ಪುಟದಿಂದ

ಅವು ಫಲಿಸಿದ ಪರಿಣಾಮ ಜಾತ್ರೆಯ ಕೊನೆಯ ದಿನದಂದು ದೇವಿಗೆ ಅಡ್ಡ ಮಲಗಿ ಹರಕೆ ತೀರಿಸುತ್ತಾರೆ.

ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಮಾರ್ಗದುದ್ದಕ್ಕೂ ನೆರೆದಿದ್ದರೂ ಅಕ್ಕಪಕ್ಕದ ಮನೆ, ಅಂಗಡಿ, ಬ್ಯಾಂಕ್, ಕಟ್ಟಡಗಳ ಮೇಲೆ ಜನ ತುಂಬಿ ತುಳುಕುತ್ತಿತ್ತು. ಸಂಜೆ ಭಕ್ತರು ಕೊಟ್ಟ ದವಸ ಧಾನ್ಯಗಳನ್ನು ಅಡುಗೆ ಮಾಡಿ ಮೊದಲು ಮೂರು ದಿನಗಳ ಕಾಲ ಉಪವಾಸದಿಂದ ದೇವರ ಸೇವೆ ಮಾಡಿದ ದುರ್ಗಿಯರಿಗೆ ಊಟ ಮಾಡಿಸಿ ನಂತರ ಭಕ್ತಾದಿಗಳಿಗೆ ಊಟ ಮಾಡಿಸಲಾಗುತ್ತದೆ .ಈ ಜಾತ್ರೆಗೆ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಶಾಸಕರು, ಸಂಸದರು, ಸ್ಥಳೀಯ ಜನಪ್ರತಿನಿಧಿಗಳು, ಸುತ್ತ ಮುತ್ತಲಿನ ಗ್ರಾಮದ ಮುಖಂಡರು ಮತ್ತು ಪೊಲೀಸ್ ಸಿಬ್ಬಂದಿ, ಆರೋಗ್ಯ ಇಲಾಖೆ ಸಿಬ್ಬಂದಿ ಗ್ರಾಮ ಪಂಚಾಯಿತಿಯವರು ಪಾಲ್ಗೊಂಡಿದ್ದರು.

# ಫಾರ್ಮರ್, ಪ್ರವಾಸೋದ್ಯಮ ಟ್ರಸ್ಟ್ ಪ್ರಾರಂಭ ಶೀಘ್ರ

## ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಹೇಳಿಕೆ | ಡಿಜಿಟಲ್ ಸೌಲಭ್ಯದಲ್ಲಿ ಬಿಡಿಸಿಸಿ ಮುಂಚೂಣಿಯಲ್ಲಿದೆ



> ಪಂಚಮಸಾಲಿ ಹರಿಹರ ಪೀಠದ ಜಗದ್ಗುರುಗಳು ವಚನಾನಂದ ಸ್ವಾಮಿಗಳ ಆಶೀರ್ವಾದ ಮತ್ತು ಪಂಚಮಸಾಲಿ ಸಮಾಜದ ಬಲಿಷ್ಠ ಶಕ್ತಿಯಿಂದ, ಸಾಮಾನ್ಯನಾದ ನಾನು ಇಂದು, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಆಯ್ಕೆ ಆಗಿರುವೆ. ಅಧ್ಯಕ್ಷ ಸ್ಥಾನ ತಪ್ಪಿಸಲು ಕೆಲವರು ಷಡ್ಯಂತ್ರ ನಡೆಸಿದರು. ಶ್ರೀಗಳು ನನ್ನ ಬೆಂಬಲಿಗೆ ನಿಂತರು. ಪಂಚಮಸಾಲಿ ಸಮಾಜ ನನಗೇನು ಮಾಡುತ್ತೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಹಾಗೆ ಇದು ಹರ ಶಕ್ತಿಯ ಸಂಕೇತ ಕೂಡಾ ಹೌದು.
>
> **– ಕೆ.ತಿಪ್ಪೇಸ್ವಾಮಿ.**
> ನೂತನ ಅಧ್ಯಕ್ಷರು
> ಬಿಡಿಸಿಸಿ ಬ್ಯಾಂಕ್ ಹೊಸಪೇಟೆ

**■ ಹಂಪಿ ಟೈಮ್ಸ್ ಕೊಟ್ಟೂರು**

"ಆಲ್ ಡಿಜಿಟಲ್ ಪೇ" ವ್ಯವಸ್ಥೆಯನ್ನು ಕಲ್ಪಸಿರುವ ಸಹಕಾರಿ ಬ್ಯಾಂಕ್ ಗಳ ಪೈಕಿ, ಬಿಡಿಸಿಸಿ ಬ್ಯಾಂಕ್, ರಾಜ್ಯದ ಮೊದಲ ಬ್ಯಾಂಕ್ ಎಂಬ ಕೀರ್ತಿ ಗಳಿಸಿ, ಜೊತೆಗೆ "ನ್ಯಾಷನಲ್ ಅವಾರ್ಡ್ "ಕೂಡಾ ಇತ್ತೀಚೆಗೆ ಲಭಿಸಿದೆ, ಇದು ನಮ್ಮ ಕೀರ್ತಿ ಹೆಚ್ಚಿಸಿದೆ ಎಂದು ಬಳ್ಳಾರಿ– ವಿಜಯನಗರ ಉಭಯ ಜಿಲ್ಲೆಗಳ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ 'ಪಂಚಮಸಾಲಿ ಸಮಾಜದ ಸಂಘಟನೆ ಮತ್ತು ಹರಿಹರ ಹರ ಪೀಠದ ಸದೃಢತೆಗೆ ಕೈಗೊಂಡ "ಮಹಾ ಕೋಟಿ ಸಂಚಿತ ನಿಧಿ" ಸಂಗ್ರಹ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ದೇಶದಲ್ಲಿ 63 ಸಾವಿರ, ಸಹಕಾರಿ ಬ್ಯಾಂಕುಗಳನ್ನ ನರೇಂದ್ರ ಮೋದಿಯವರು ಕಂಪ್ಯೂಟರೈಜ್ ಮಾಡಲು ಮುಂದಾಗಿದ್ದು ,ರಾಜ್ಯದ 5 ಸಹಕಾರಿ ಸೊಸೈಟಿಗಳು ಇದಕ್ಕೆ ಆಯ್ಕೆ ಆಗಿದ್ದು,ನಮ್ಮ ಉಭಯ ಜಿಲ್ಲೆಗಳ 3 ಸಹಕಾರಿ ಸೊಸೈಟಿಗಳು ಸೇರಿವೆ, ಶೀಘ್ರದಲ್ಲಿಯೇ ದೆಹಲಿಯಲ್ಲಿ ಇದರ ಉದ್ಘಾಟನೆ ನೆರವೇರಲಿದೆ ಎಂದು ಹೇಳಿ, ಹೆಮ್ಮೆ ವ್ಯಕ್ತಪಡಿಸಿದರು. ಉಭಯ ಜಿಲ್ಲೆಗಳ ಸಹಕಾರಿ ಕ್ಷೇತ್ರದಲ್ಲಿ ಹೊಸದಾಗಿ ಫಾರ್ಮರ್ ಟ್ರಸ್ಟ್, ಹಂಪಿ ಪ್ರವಾಸೋದ್ಯಮ ಟ್ರಸ್ಟ್ ಮಾಡಲು ಕ್ರಿಯಾಯೋಜನೆ ಸಿದ್ಧವಾಗಿದೆ ಜೊತೆಗೆ ಬಿಡಿಸಿಸಿ ಬ್ಯಾಂಕ್ ನಲ್ಲಿ "ರಾಯಲ್ ಅನ್ ಲೈನ್" ವ್ಯವಸ್ಥೆಯನ್ನು ಕಲ್ಪಿಸಲು ಸಿದ್ಧತೆ ನಡೆದಿದ್ದು, ಶೀಘ್ರದಲ್ಲಿಯೇ ಉದ್ಘಾಟನೆ ಕಾರ್ಯ ನೆರವೇರಲಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ನಲ್ಲಿ ಶೇ.80 ರಷ್ಟು ಗ್ರಾಹಕರು ರೈತರಿದ್ದು, ತಮ್ಮ ಅಭಿವೃದ್ಧಿಗೆ ನಿಮ್ಮ ಮನೆ ಮಗನಂತಿರುವ ತನ್ನನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಭೆಯಲ್ಲಿ ಕೋರಿದರು.

ಹರಿಹರ ಪೀಠದ ಜಗದ್ಗುರುಗಳು ವಚನಾನಂದ ಸ್ವಾಮಿಗಳು, ರಾಜ್ಯ ಅಧ್ಯಕ್ಷರು ಜಿ.ಪಿ ಪಾಟೀಲ್, ಪೀಠದ ಆಡಳಿತಾಧಿಕಾರಿ ಡಾ.ರಾಜಕುಮಾರ್, ಜಿಲ್ಲಾ ಅಧ್ಯಕ್ಷರು ಪ್ರಕಾಶ್ ಪಾಟೀಲ್, ತಾಲೂಕು ಅಧ್ಯಕ್ಷರು ಚಾಪಿಚಂದ್ರಪ್ಪ, ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರು ವೀಣಾವಿವೇಕನಂದಗೌಡ, ಮಾಜಿ ಜಿಲ್ಲಾ ಅಧ್ಯಕ್ಷ ಬಾವಿ ಬೆಟ್ಟಪ್ಪ, ಸಮಾಜದ ಮುಖಂಡ ನೀಲಕಂಠಪ್ಪ, ಅಶೋಕ್ ಎಂಜಿನಿಯರ್ ಸೇರಿದಂತೆ ಅನೇಕರು ಸೇರಿ ತಿಪ್ಪೇಸ್ವಾಮಿ ಅವರನ್ನು ಸನ್ಮಾನಿಸಿದರು.

# ಲೋಕಾಯುಕ್ತರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ

**■ ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದಿಂದ ಜಿಲ್ಲೆಯಲ್ಲಿ ಸಂಡೂರು ಮತ್ತು ಕಂಪ್ಲಿ ತಾಲೂಕು ಕೇಂದ್ರಗಳಲ್ಲಿ ಜ.09, 10 ರಂದು ನಡೆಯಬೇಕಿದ್ದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆಯನ್ನು ಜ.17 ಮತ್ತು 18 ರಂದು ನಡೆಸಲಾಗುತ್ತದೆ ಎಂದು ಬಳ್ಳಾರಿ ವಿಭಾಗ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಜ.17 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ, ಜ.18 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಿರುಗುಪ್ಪ ಸಿಡಿಪಿಓ ಕಚೇರಿ ಸಭಾಂಗಣದಲ್ಲಿ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ನಡೆಯಲಿದೆ. ಕುಂದು ಕೊರತೆಗಳಿರುವ ಸಾರ್ವಜನಿಕರು ನಿಗದಿತ ದಿನ ಮತ್ತು ಸ್ಥಳದಲ್ಲಿ ತಮ್ಮ ದೂರು ಅರ್ಜಿಗಳನ್ನು ನೀಡಬಹುದು. ಕುಂದುಕೊರತೆಗಳ ಅಹವಾಲುಗಳ ಅರ್ಜಿಗಳನ್ನು ಸ್ವೀಕರಿಸಿ, ವಿಚಾರಿಸಲಾಗುತ್ತದೆ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ವಿಭಾಗ ಲೋಕಾಯುಕ್ತರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ:01 ಮತ್ತು 02 ಗಳನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ.

# ಜಾಗತಿ ಸಮಾವೇಶದ ಭೀತಿಪತ



**■ ಹಂಪಿ ಟೈಮ್ಸ್ ಹರಪನಹಳ್ಳಿ**

ಪಟ್ಟಣದ ಪ್ರವಾಸಿ ಮಂದಿದಲ್ಲಿ ಶೋಷಿತರ ಜಾಗೃತಿ ಸಮಾವೇಶದ ಭೀತ್ತಿಪತ್ರವನ್ನು ಡಿ.ಬಸವರಾಜ, ಕೋಡಿಹಳ್ಳಿ ಭೀಮಪ್ಪ ಎಂವಿ ಅಂಜಿನಪ್ಪ ಹಲಗೇರಿ ಮಂಜಪ್ಪ ಹಾಗೂ ಇತರರು ಬಿಡುಗಡೆ ಮಾಡಿದರು.

ಶೋಷಿತ ಸಮುದಾಯಗಳನ್ನು ಹತ್ತಿಕ್ಕುವ ಹುನ್ನಾರು ಸಾಗುತ್ತಿದೆ ಅದನ್ನು ದಮನ ಮಾಡಲು ಶೋಷಿತರ ಜಾಗೃತಿ ಸಮಾವೇಶ ಜ.28ರಂದು ಚಿತ್ರದುರ್ಗದಲ್ಲಿ ಅಯೋಜಿಸಲಾಗಿದ್ದು ಪಕ್ಷ ಭೇದ ಮರೆತು ನಾಡಿನ ದಲಿತ, ಹಿಂದುಳಿದ, ಅಲೆಮಾರಿ, ಆದಿವಾಸಿ ಮತ್ತು ಅಲ್ಪ ಸಂಖ್ಯಾತ ಸಮುದಾಯಗಳ ಜನಸಾಮ್ಯಾನರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ನಡೆದ ಸುದ್ಧಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲ ಪಟ್ಟಭದ್ರ ಹಿತಾಶಕ್ತಿಗಳು ಶೋಷಿತ ಸಮುದಾಯಗಳನ್ನು ತುಳಿಯುವುದಕ್ಕೆ ಹೊಂಚುಹಾಕುತ್ತಿವೆ.

ಸುಳ್ಳು ಜಾತಿಗಳ ಅಂಕಿ ಅಂಶಗಳ ಮೂಲಕ ರಾಜಕೀಯ ಹಾಗೂ ಅರ್ಥಿಕ ಸೌಲಭ್ಯಗಳನ್ನು ಪಡೆಯುವಲ್ಲಿ ಯಶಸ್ವಿ ಸಾಧಿಸಿದ್ದಾರೆ. ಇದನ್ನು ಮಟ್ಟಹಾಕಲು ಸಿದ್ದರಾಮಯ್ಯ ಅವರು ಕಾಂತರಾಜ ವರದಿ ಮೂಲಕ ಜಾತಿ ಸಮೀಕ್ಷೆಯನ್ನು ನಡೆಸಿದ್ದಾರೆ. ಈ ವರದಿಯನ್ನು ಜಾರಿ ಮಾಡುವುದಕ್ಕೂ ಮುನ್ನವೇ ಮೇಲ್ವರ್ಗದ ಕೆಲ ಹಿತಾಶಕ್ತಿಗಳು ವಿರೋಧಿಸುತ್ತಿದ್ದಾರೆ. ಜಾತಿ ಆಧಾರದ ಮೇಲೆ ಸಮಾನತೆ ತರುವ ನಾಯಕ ಸಿದ್ದರಾಮಯ್ಯ ಅವರನ್ನು ಬೆಂಬಲಿಸಬೇಕಿದೆ ಎಂದರು.

ರೇಷ್ಮೆ ಉದ್ಯಮಗಳ ನಿಗಮದ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ವಕ್ತಾರ ಡಿ.ಬಸವರಾಜ ಮಾತನಾಡಿ, 1931 ರಲ್ಲೇ ಬ್ರಿಟೀಷರು ಜಾತಿ ಸಮೀಕ್ಷೆ ಮೂಲಕ ಸಮಾನತೆ ತರಲು ಉದ್ದೇಶಿಸಿದ್ದರು. ಅದನ್ನು ಸಾಧ್ಯವಾಗಲು ಬಿಡಲಿಲ್ಲ. ಮತ್ತೆ ದೇವರಾಜ ಅರಸ ಆಡಳಿತದಲ್ಲಿ ಹಾವನೂರು ವರದಿಯನ್ನು ಜಾರಿ ಮಾಡುವ ಮೂಲಕ ನಾಡಿನ ಜನತೆಗೆ ನ್ಯಾಯ ಒದಗಿಸಿದ್ದಾರೆ. ಈಗ ಸಿದ್ದರಾಮಯ್ಯ ಕಾಂತರಾಜ ವರದಿಯನ್ನು ಜಾರಿ ಮಾಡಲು ಸಿದ್ದರಿದ್ದರೂ ಅವರ ಕಾಲನ್ನು ಎಳೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅವರಿಗೆ ಬೆಂಬಲ ನೀಡಲು ಈ ಶೋಷಿತ ಜಾಗೃತಿ ಸಮಾವೇಶದಲ್ಲಿ 10 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಬೇಕು ಎಂದರು. ಈ ಸಂದರ್ಭದಲ್ಲಿ ವಸಂತಪ್ಪ. ಮೋತಿ ನಾಯ್ಕ. ಎಲ್ ಎಮ್ ಮಂಜನಾಯ್ಕ. ಜಾವೀದ್. ಅಶೋಕ್. ಕೃಷ್ಣಪ್ಪ. ಓ ರಾಮಪ್ಪ. ಹುಲಿಕಟ್ಟಿ ಚಂದ್ರಪ್ಪ. ಹನುಮಂತಪ್ಪ. ಪಾಲಾಕ್ಷಪ್ಪ. ಲಾಟಿ ದಾದಾಪೀರ್. ವಕೀಲರಗಳಾದ ವೆಂಕಟೇಶ್. ಗೋಣಿಬಸಪ್ಪ. ಡಿಶ್ ವೆಂಕಟೇಶ್. ಪ್ರತಾಪ್ ಛಲವಾದಿ. ಅನೇಕ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

# ಭಾರತ ಸಂಕಲ್ಪ ಯಾತ್ರೆ ಯಶಸ್ವಿ

## ಶಾಸಕ ವೈ.ಎಂ.ಸತೀಶ್ ಹೇಳಿಕೆ | ಕೇಂದ್ರ ಸರ್ಕಾರದ ಯೋಜನೆ ಗ್ರಾಮೀಣ ಪ್ರದೇಶದ ಜನರಿಗೂ ತಲುಪಿಸಿ

**■ ಹಂಪಿ ಟೈಮ್ಸ್ ಬಳ್ಳಾರಿ**

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೂ ತಲುಪಿಸುವ ನಿಟ್ಟಿನಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ಅಭಿಯಾನ ಯಶಸ್ವಿಯಾಗಿ ನಡೆಯುತ್ತಿದೆ ಎಂದು ವಿಧಾನಪರಿಷತ್ ಶಾಸಕ ವೈ.ಎಂ.ಸತೀಶ್ ಅವರು ಹೇಳಿದರು.

ಕುರುಗೋಡು ತಾಲ್ಲೂಕಿನ ಬಾದನಹಟ್ಟಿ ಗ್ರಾಮದಲ್ಲಿ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಬಾದನಹಟ್ಟಿ ವತಿಯಿಂದ ಇತ್ತೀಚಿಗೆ ನಡೆದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.




ಕೇಂದ್ರ ಸರ್ಕಾರ ನಾಗರೀಕರ ಅಭಿವೃದ್ಧಿಗೆ ನೂರಾರು ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳ ಲಾಭವನ್ನು ಪಡೆದ ಫಲಾನುಭವಿಗಳು ದೇಶದ ಪ್ರತಿ ಮನೆಯಲ್ಲೂ ಇದ್ದಾರೆ, ಕೇಂದ್ರ ಸರ್ಕಾದ ಯೋಜನೆಗಳು ಸಮಾಜದ ಕಟ್ಟ ಕಡೆಯ ನಾಗರೀಕರಿಗೂ ತಲುಪಿಸುವುದೇ ಕೇಂದ್ರ ಸರ್ಕಾರದ ಗುರಿಯಾಗಿದೆ ಎಂದರು.

ಕೇಂದ್ರದ ಸರ್ಕಾರದ ಮುದ್ರಾಯೋಜನೆ, ಜನಧನ್ ಯೋಜನೆ, ಪಿ.ಎಂ ವಿಶ್ವಕರ್ಮ ಯೋಜನೆ, ಉಜ್ವಲ ಯೋಜನೆ, ಕೃಷಿ ಸಮ್ಮಾನ್ ಯೋಜನೆ, ಅನ್ನ ಭಾಗ್ಯ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಮಾಹಿತಿ ಎಲ್‌ಇಡಿ ಪರದೆಯ ವಾಹನಗಳ ಮೂಲಕ ಗ್ರಾಪಂ ಹಾಗೂ ನಗರ ಪ್ರದೇಶದಲ್ಲಿ ಸಂಚರಿಸಿ ಜನರಿಗೆ ಜಾಗೃತಿ ಮೂಡಿಸುವ ಸಲುವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಡ್ರೋನ್‌ನಂತಹ ಸುಧಾರಿತ ತಂತ್ರಜ್ಞಾನದ ಬಳಕೆಯಾಗಬೇಕು. ನ್ಯಾನೋ ಯೂರಿಯಾ ಮತ್ತು ಇತರ ಕೀಟನಾಶಕಗಳನ್ನು ಸಿಂಪಡಿಸಲು ಕೈಗೆಟುಕುವ ದರದಲ್ಲಿ ರೈತರಿಗೆ ದೊರೆಯುತ್ತಿದೆ ಕೇಂದ್ರ ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪಿಸುವ ಮೂಲಕ ಅರಿವು ಮೂಡಿಸಬೇಕು ಎಂದರು.

ನಬಾರ್ಡ್‌ನ ವ್ಯವಸ್ಥಾಪಕ ನಿರ್ದೇಶಕ ಯುವರಾಜ್ ಕುಮಾರ್ ಅವರು ಮಾತನಾಡಿ, ಕೆಸಿಸಿ, ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ, ಎಪಿವೈ, ಪಿಎಂ ಸ್ವಾನಿಧಿ, ಪಿಎಂ ವಿಶ್ವಕರ್ಮ, ಮುದ್ರಾ ಯೋಜನೆ, ಉಜ್ವಲಾ ಯೋಜನೆ ಮುಂತಾದ ಎಲ್ಲಾ ಕೇಂದ್ರ ಸರ್ಕಾರದ ಯೋಜನೆಗಳ ಲಾಭ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್ ಮಾತನಾಡಿ, ಸರ್ಕಾರಿ ಮತ್ತು ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಎಲ್ಲಾ ನಾಗರಿಕರು ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಕಾರ್ಡ್ ಪಡೆಯಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ಟಿಬಿ ನಿರ್ಮೂಲನಾ ಕಾರ್ಯಕ್ರಮದಡಿ ಫಲಾನುಭವಿಗಳ ಪೌಷ್ಟಿಕಾಂಶದ ವೆಚ್ಚಗಳಿಗಾಗಿ ಮಾಸಿಕ ರೂ.500 ಗಳನ್ನು ಡಿಬಿಟಿ ಮೂಲಕ ನೀಡಲಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರತಿಜ್ಞಾವಿಧಿ ಭೋದಿಸಲಾಯಿತು. ಕೇಂದ್ರ ಸರ್ಕಾರದಿಂದ ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳ ಮಾಹಿತಿಯ ಕಿರುಪುಸ್ತಕ ಹಾಗೂ 2024 ರ ಕ್ಯಾಲೆಂಡರ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಭಾರಿ ಜಿ. ಗೋಪಾಲಕೃಷ್ಣ, ಉಕ್ಕು ಸಚಿವಾಲಯದ ಉಪ ಕಾರ್ಯದರ್ಶಿ ಜಿ.ಪಿ.ಅಧ್ಯಕ್ಷ ಸಿದ್ದೇಶ್, ಎಲ್‌ಡಿಎಂ ಸೋಮನಗೌಡ ಐನಾಪೂರ ಸೇರಿದಂತೆ ಗ್ರಾಪಂ ಅಧ್ಯಕ್ಷರು, ಸದಸ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA